सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994

(1994ರ ಅಧಿನಿಯಮ ಸಂಖ್ಯೆ 57)

**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# THE PRE-CONCEPTION AND PRENATAL DIAGNOSTIC TECHNIQUES (PROHIBITION OF SEX SELECTION) ACT, 1994

**(Act No. 57 of 1994)**

**[As on 25th April, 2011]**

## ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಪ್ರಿ–ಕಾನ್ಸೆಪ್ಷನ್ ಅಂಡ್ ಪ್ರಿನಾಟಲ್ ಡೈಅಗ್ನಾಸ್ಟಿಕ್ ಟೆಕ್ನಿಕ್ಸ್ (ಪ್ರಾಹಿಬಿಷನ್ ಆಫ್ ಸೆಕ್ಸ್ ಸೆಲೆಕ್ಷನ್) ಆ್ಯಕ್ಟ್, 1994 (1994ರ 57) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 34 ರಿಂದ 56 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ:

## PREFACE

This edition of the Pre-conception and Prenatal Diagnostic Techniques (Prohibition of Sex Selection) Act, 1994 (57 of 1994) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 34 to 56.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi
Date :

**V.K. BHASIN**
Secretary,
Government of India.

# ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994

## ಪ್ರಕರಣಗಳ ಅನುಕ್ರಮಣಿಕೆ


**ಪ್ರಕರಣಗಳು:** **ಪುಟಗಳು**

**ಅಧ್ಯಾಯ – I**
**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1
2. ಪರಿಭಾಷೆಗಳು 1

**ಅಧ್ಯಾಯ – II**
**ಆನುವಂಶೀಯತೆ ಸಲಹಾ ಕೇಂದ್ರಗಳು, ಆನುವಂಶೀಯತೆ ಪ್ರಯೋಗಾಲಯಗಳು ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ವಿನಿಯಮನ**

3. ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ವಿನಿಯಮನ 5
3ಎ. ಲಿಂಗ ಆಯ್ಕೆಯ ನಿಷೇಧ 6
3ಬಿ. ಈ ಅಧಿನಿಯಮದ ಮೇರೆಗೆ ನೋಂದಾಯಿತರಾಗಿರದ ವ್ಯಕ್ತಿಗಳು, ಪ್ರಯೋಗಾಲಯಗಳು, ಚಿಕಿತ್ಸಾಲಯಗಳು, ಇತ್ಯಾದಿಗಳಿಗೆ ಶ್ರವಣಾತೀತ ಧ್ವನಿತರಂಗ ಚಿತ್ರಣ ಯಂತ್ರಗಳು, ಇತ್ಯಾದಿಗಳನ್ನು ಮಾರಾಟ ಮಾಡುವುದರ ಮೇಲೆ ನಿಷೇಧ 6

**ಅಧ್ಯಾಯ – III**
**ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ ವಿನಿಯಮನ**

4. ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ ವಿನಿಯಮನ 6
5. ಗರ್ಭಿಣಿ ಮಹಿಳೆಯ ಲಿಖಿತ ಸಮ್ಮತಿ ಮತ್ತು ಭ್ರೂಣದ ಲಿಂಗವನ್ನು ತಿಳಿಸುವುದಕ್ಕೆ ನಿಷೇಧ 8
6. ಲಿಂಗ ನಿರ್ಧರಣೆಯನ್ನು ನಿಷೇಧಿಸಲಾಗಿದೆ 9

**ಅಧ್ಯಾಯ – IV**
**ಕೇಂದ್ರ ಮೇಲ್ವಿಚಾರಣಾ ಮಂಡಲಿ**

7. ಕೇಂದ್ರ ಮೇಲ್ವಿಚಾರಣಾ ಮಂಡಲಿಯ ರಚನೆ 9
8. ಸದಸ್ಯರ ಪದಾವಧಿ 11
9. ಮಂಡಲಿಯ ಸಭೆಗಳು 12
10. ಖಾಲಿಸ್ಥಾನಗಳು, ಇತ್ಯಾದಿಯು ಮಂಡಲಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ 12

11. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹಯೋಗ 13
12. ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ 13
13. ಮಂಡಲಿಯ ಆದೇಶಗಳ ಮತ್ತು ಇತರ ಪತ್ರಗಳ ಅಧಿಪ್ರಮಾಣೀಕರಣ 13
14. ಸದಸ್ಯನಾಗಿ ನೇಮಕಗೊಳ್ಳುವುದಕ್ಕೆ ಅನರ್ಹತೆಗಳು 14
15. ಮರುನೇಮಕಕ್ಕೆ ಸದಸ್ಯನಿಗೆ ಇರಬೇಕಾದ ಅರ್ಹತೆ 14
16. ಮಂಡಲಿಯ ಪ್ರಕಾರ್ಯಗಳು 14
16ಎ. ರಾಜ್ಯ ಮೇಲ್ವಿಚಾರಣಾ ಮಂಡಲಿ ಮತ್ತು ಒಕ್ಕೂಟ ರಾಜ್ಯಕ್ಷೇತ್ರದ ಮೇಲ್ವಿಚಾರಣಾ ಮಂಡಲಿಯ ರಚನೆ 15

## ಅಧ್ಯಾಯ – V
## ಸಮುಚಿತ ಪ್ರಾಧಿಕಾರ ಮತ್ತು ಸಲಹಾ ಸಮಿತಿ

17. ಸಮುಚಿತ ಪ್ರಾಧಿಕಾರ ಮತ್ತು ಸಲಹಾ ಸಮಿತಿ 18
17ಎ. ಸಮುಚಿತ ಪ್ರಾಧಿಕಾರಗಳ ಅಧಿಕಾರಗಳು 21

## ಅಧ್ಯಾಯ – VI
## ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ನೋಂದಣಿ

18. ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ನೋಂದಣಿ 22
19. ನೋಂದಣಿ ಪ್ರಮಾಣಪತ್ರ 23
20. ನೋಂದಣಿಯ ರದ್ದಿಯಾತಿ ಅಥವಾ ಅಮಾನತು 24
21. ಅಪೀಲು 24

## ಅಧ್ಯಾಯ – VII
## ಅಪರಾಧಗಳು ಮತ್ತು ದಂಡನೆಗಳು

22. ಪ್ರಸವ ಪೂರ್ವ ಲಿಂಗ ನಿರ್ಧರಣೆಗೆ ಸಂಬಂಧಿಸಿದ ಜಾಹೀರಾತಿನ ನಿಷೇಧ ಮತ್ತು ಅದರ ಉಲ್ಲಂಘನೆಗಾಗಿ ದಂಡನೆ 25
23. ಅಪರಾಧಗಳು ಮತ್ತು ದಂಡನೆಗಳು 26
24. ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪೂರ್ವಭಾವನೆ 27
25. ಈ ಅಧಿನಿಯಮದ ಅಥವಾ ನಿಯಮಗಳ ಯಾವ ಉಪಬಂಧಗಳ ಉಲ್ಲಂಘನೆಗಾಗಿ ನಿರ್ದಿಷ್ಟ ದಂಡನೆಯನ್ನು ಉಪಬಂಧಿಸಿಲ್ಲವೋ ಅವುಗಳ ಉಲ್ಲಂಘನೆಗಾಗಿ ದಂಡನೆ 27
26. ಕಂಪನಿಗಳಿಂದ ಅಪರಾಧಗಳು 27

27. ಅಪರಾಧವು ಸಂಜ್ಞೇಯವಾದುದು, ಜಾಮೀನೀಯವಲ್ಲದ್ದು ಮತ್ತು ರಾಜಿ ಮಾಡಿಕೊಳ್ಳಲಾಗದ್ದು ಆಗಿರತಕ್ಕದ್ದು 28
28. ಅಪರಾಧಗಳ ಸಂಜ್ಞೇಯತೆ 28

## ಅಧ್ಯಾಯ – VIII
## ಸಂಕೀರ್ಣ

29. ದಾಖಲೆಗಳ ನಿರ್ವಹಣೆ 29
30. ದಾಖಲೆಗಳನ್ನು ಶೋಧಿಸಲು ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರ 30
31. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ 30
31ಎ. ತೊಂದರೆಗಳ ನಿವಾರಣೆ 30
32. ನಿಯಮಗಳನ್ನು ರಚಿಸಲು ಆಧಿಕಾರ 31
33. ವಿನಿಯಮನಗಳನ್ನು ರಚಿಸುವ ಅಧಿಕಾರ 33
34. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು 33

# ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994

**(1994ರ ಅಧಿನಿಯಮ ಸಂಖ್ಯೆ 57)**

**[20ನೇ ಸೆಪ್ಟೆಂಬರ್ 1994]**

ಗರ್ಭಧಾರಣೆಗೆ ಮುಂಚೆ ಅಥವಾ ನಂತರ ಲಿಂಗ ಆಯ್ಕೆಯನ್ನು ನಿಷೇಧಿಸುವುದಕ್ಕಾಗಿ ಮತ್ತು ಆನುವಂಶೀಯ ವೈಪರೀತ್ಯತೆಗಳನ್ನು ಅಥವಾ ಜೀವದ್ರವ್ಯದ ವಿಕಾರಗಳನ್ನು ಅಥವಾ ವರ್ಣತಂತುವಿನ ವೈಪರೀತ್ಯತೆಗಳನ್ನು ಅಥವಾ ಹುಟ್ಟಿನಿಂದ ಬರುವ ಕೆಲವು ವಿರೂಪತೆಗಳನ್ನು ಅಥವಾ ಲಿಂಗ ವಿಕಾರವನ್ನು ಪತ್ತೆಹಚ್ಚುವ ಉದ್ದೇಶಗಳಿಗಾಗಿ ಪ್ರಸವ ಪೂರ್ವ ಕಾಲದಲ್ಲಿ ಅವುಗಳನ್ನು ಪತ್ತೆಹಚ್ಚುವ ತಂತ್ರವಿಧಾನಗಳನ್ನು ವಿನಿಯಮಿಸುವುದಕ್ಕಾಗಿ ಮತ್ತು ಹೆಣ್ಣು ಭ್ರೂಣ ಹತ್ಯೆಗೆ ಕಾರಣವಾಗುವ ಲಿಂಗ ನಿರ್ಧರಣೆಗೆ ಅವುಗಳನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಗರ್ಭಧಾರಣಾಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಪ್ರಾಧಿಕಾರ" ಎಂದರೆ 17ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಮುಚಿತ ಪ್ರಾಧಿಕಾರ;

(ಬಿ) "ಮಂಡಲಿ" ಎಂದರೆ 7ನೇ ಪ್ರಕರಣದ ಮೇರೆಗೆ ರಚಿತವಾದ ಕೇಂದ್ರ ಮೇಲ್ವಿಚಾರಣಾ ಮಂಡಲಿ;

(ಬಿಎ) "ಪಿಂಡ" ಎಂದರೆ ಗರ್ಭದ ಹೊರ ಪೊರೆಗಳು ಹಾಗೂ ಗರ್ಭ ಅಥವಾ ಭ್ರೂಣವೂ ಸೇರಿದಂತೆ ಗರ್ಭಾಂಕುರದಿಂದ ಜನನದವರೆಗಿನ ಬೆಳವಣಿಗೆಯ ಯಾವುದೇ ಹಂತದಲ್ಲಿ ಗರ್ಭದಲ್ಲಾಗುವ ಯಾವುದೇ ಉತ್ಪತ್ತಿ;

(ಬಿಬಿ) "ಗರ್ಭ" ಎಂದರೆ ಗರ್ಭಾಂಕುರದ ನಂತರ ಎಂಟು ವಾರಗಳ ಕೊನೆಯವರೆಗೆ (ಐವತ್ತಾರು ದಿನಗಳವರೆಗೆ) ಬೆಳೆಯುತ್ತಿರುವ ಮಾನವ ಜೀವಾಣು;

(ಬಿಸಿ) "ಭ್ರೂಣ" ಎಂದರೆ ಗರ್ಭಾಂಕುರದ ಅಥವಾ ಸೃಷ್ಟಿಯಾದ ನಂತರದ ಐವತ್ತೇಳನೇ ದಿನದಿಂದ ಆರಂಭವಾಗಿ (ಅದರ ಬೆಳವಣಿಗೆಯು ಯಾವುದೇ ಸಮಯದಲ್ಲಿ ತಾತ್ಕಾಲಿಕವಾಗಿ ನಿಂತಿದ್ದರೆ ಆ ಸಮಯವನ್ನು ಹೊರತುಪಡಿಸಿ) ಜನನದಲ್ಲಿ ಕೊನೆಯಾಗುವ ಅದರ ಬೆಳವಣಿಗೆಯ ಅವಧಿಯಲ್ಲಿನ ಮಾನವ ಜೀವಾಣು;

(ಸಿ) "ಆನುವಂಶೀಯತೆ ಸಲಹಾ ಕೇಂದ್ರ" ಎಂದರೆ ರೋಗಿಗಳಿಗೆ ಆನುವಂಶೀಯತೆಯ ಬಗ್ಗೆ ಸಲಹೆ ನೀಡುವ ಸಂಸ್ಥೆ, ಆಸ್ಪತ್ರೆ, ನರ್ಸಿಂಗ್ ಹೋಮ್ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಸ್ಥಳ;

(ಡಿ) "ಆನುವಂಶೀಯತೆ ಚಿಕಿತ್ಸಾಲಯ" ಎಂದರೆ ಪ್ರಸವ ಪೂರ್ವ ಪತ್ತೆ ಪ್ರಕ್ರಿಯೆಯನ್ನು ನಡೆಸುವುದಕ್ಕೆ ಉಪಯೋಗಿಸುವ ಚಿಕಿತ್ಸಾಲಯ, ಸಂಸ್ಥೆ, ಆಸ್ಪತ್ರೆ, ನರ್ಸಿಂಗ್ ಹೋಮ್ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಸ್ಥಳ;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, "ಆನುವಂಶೀಯತೆ ಚಿಕಿತ್ಸಾಲಯ" ಎಂಬುದು, ಭ್ರೂಣದ ಲಿಂಗವನ್ನು ನಿರ್ಧರಿಸುವ ಸಾಮರ್ಥ್ಯವಿರುವ ಶ್ರವಣಾತೀತ ಧ್ವನಿತರಂಗ ಯಂತ್ರವನ್ನು ಅಥವಾ ಬಿಂಬ ಚಿತ್ರಣ ಯಂತ್ರವನ್ನು ಅಥವಾ ಕ್ಷಿಪ್ರ ವೀಕ್ಷಣ ಯಂತ್ರವನ್ನು ಅಥವಾ ಇತರ ಸಾಧನವನ್ನು ಅಥವಾ ಗರ್ಭ ಧರಿಸಿರುವ ಕಾಲದಲ್ಲಿ ಲಿಂಗ ಪತ್ತೆಹಚ್ಚುವ ಅಥವಾ ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಯ ಸಾಮರ್ಥ್ಯವನ್ನು ಹೊಂದಿರುವ, ಸಾಗಿಸಬಹುದಾದ ಸಲಕರಣೆಯನ್ನು ಬಳಸುವುದಕ್ಕೆ ಇರುವ ವಾಹನವನ್ನು ಒಳಗೊಳ್ಳುತ್ತದೆ;

(ಇ) "ಆನುವಂಶೀಯತೆ ಪ್ರಯೋಗಾಲಯ" ಎಂದರೆ ಪ್ರಯೋಗಾಲಯ ಎಂದು ಅರ್ಥ ಮತ್ತು ಅದು, ಪ್ರಸವಪೂರ್ವ ಪತ್ತೆ ಪರೀಕ್ಷೆಗಾಗಿ ಆನುವಂಶೀಯತೆ ಚಿಕಿತ್ಸಾಲಯದಿಂದ ಸ್ವೀಕರಿಸಿದ ಮಾದರಿಗಳ ವಿಶ್ಲೇಷಣೆಯನ್ನು ಅಥವಾ ಪರೀಕ್ಷೆಗಳನ್ನು ಮಾಡುವುದಕ್ಕಾಗಿ ಸೌಲಭ್ಯಗಳನ್ನು ಒದಗಿಸುವ ಸ್ಥಳವನ್ನು ಒಳಗೊಳ್ಳುತ್ತದೆ;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, "ಆನುವಂಶೀಯತೆ ಪ್ರಯೋಗಾಲಯ" ಎಂಬುದು ಭ್ರೂಣದ ಲಿಂಗವನ್ನು ನಿರ್ಧರಿಸುವ ಸಾಮರ್ಥ್ಯವಿರುವ ಶ್ರವಣಾತೀತ ಧ್ವನಿ ತರಂಗ ಯಂತ್ರವನ್ನು ಅಥವಾ ಬಿಂಬಚಿತ್ರಣ ಯಂತ್ರವನ್ನು ಅಥವಾ ಕ್ಷಿಪ್ರ ವೀಕ್ಷಣ ಯಂತ್ರವನ್ನು ಅಥವಾ ಇತರ ಸಾಧನವನ್ನು ಅಥವಾ ಗರ್ಭ ಧರಿಸಿರುವ ಕಾಲದಲ್ಲಿ ಲಿಂಗ ಪತ್ತೆಹಚ್ಚುವ ಅಥವಾ ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಯ ಸಾಮರ್ಥ್ಯವನ್ನು ಹೊಂದಿರುವ, ಸಾಗಿಸಬಹುದಾದ ಸಲಕರಣೆಯನ್ನು ಬಳಸುವುದಕ್ಕೆ ಇರುವ ಸ್ಥಳವನ್ನು ಒಳಗೊಳ್ಳುತ್ತದೆ;

(ಎಫ್) "ಸ್ತ್ರೀರೋಗ ತಜ್ಞ" ಎಂದರೆ ಸ್ತ್ರೀರೋಗ ಶಾಸ್ತ್ರ ಮತ್ತು ಪ್ರಸೂತಿ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರುವ ವ್ಯಕ್ತಿ;

(ಜಿ) "ಆನುವಂಶೀಯತೆ ವೈದ್ಯ ಶಾಸ್ತ್ರಜ್ಞ" ಎಂಬುದು ಲಿಂಗ ಆಯ್ಕೆ ಮತ್ತು ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ ಕ್ಷೇತ್ರಗಳಲ್ಲಿ, ಆನುವಂಶೀಯತೆ ವಿಜ್ಞಾನದಲ್ಲಿ ಪದವಿಯನ್ನು ಅಥವಾ ಡಿಪ್ಲೊಮಾವನ್ನು ಹೊಂದಿರುವ; ಅಥವಾ

(i) ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಮೇರೆಗೆ ಮಾನ್ಯತೆ ಪಡೆದ ಯಾವುದಾದರೊಂದು ವೈದ್ಯಕೀಯ ಅರ್ಹತೆಯನ್ನು; ಅಥವಾ

(ii) ಜೈವಿಕ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವಿಯನ್ನು

– ಪಡೆದ ನಂತರ ಅಂಥ ಕ್ಷೇತ್ರದಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಅನುಭವವನ್ನು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಹೆಚ್) "ಮಕ್ಕಳ ವೈದ್ಯ ತಜ್ಞ" ಎಂದರೆ ಮಕ್ಕಳ ವೈದ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರುವ ವ್ಯಕ್ತಿ;

(ಐ) "ಪ್ರಸವಪೂರ್ವ ಪತ್ತೆ ಕಾರ್ಯವಿಧಾನಗಳು" ಎಂದರೆ ಗರ್ಭಧಾರಣೆಗೆ ಮುಂಚೆ ಅಥವಾ ನಂತರ ಲಿಂಗದ ಆಯ್ಕೆಗಾಗಿ ಶ್ರವಣಾತೀತ ಧ್ವನಿತರಂಗ ಚಿತ್ರಣ, ಭ್ರೂಣ ದೆಸೆ ದರ್ಶಕ, ಯಾವುದೇ ರೀತಿಯ ವಿಶ್ಲೇಷಣೆಗಾಗಿ ಅಥವಾ ಪ್ರಸವಪೂರ್ವ ಪತ್ತೆ ಪರೀಕ್ಷೆಗಳನ್ನು ಮಾಡುವುದಕ್ಕಾಗಿ, ಆನುವಂಶೀಯತೆ ಪ್ರಯೋಗಾಲಯಕ್ಕೆ ಅಥವಾ ಆನುವಂಶೀಯತೆ ಚಿಕಿತ್ಸಾಲಯಕ್ಕೆ ಕಳುಹಿಸುವುದಕ್ಕಾಗಿ ಭ್ರೂಣದ ಮೇಲಿನ ಮೊದಲನೆಯ ಪೊರೆಯ ದ್ರವವನ್ನು, ಭ್ರೂಣದ ಹೊರಪೊರೆಯ ಮೇಲಿನ ಲೋಮವನ್ನು, ಪುರುಷನ ಅಥವಾ ಮಹಿಳೆಯ ರಕ್ತದ ಅಥವಾ ಯಾವುದೇ ಇತರ ಅಂಗಾಂಶದ ಅಥವಾ ದ್ರವದ ಮಾದರಿಗಳನ್ನು ತೆಗೆದುಕೊಳ್ಳುವುದು

ಅಥವಾ ತೆಗೆಯುವುದು ಮುಂತಾದಂಥ ಎಲ್ಲ ಸ್ತ್ರೀರೋಗ ಶಾಸ್ತ್ರದ ಅಥವಾ ಪ್ರಸೂತಿ ಶಾಸ್ತ್ರದ ಅಥವಾ ವೈದ್ಯಕೀಯ ಕಾರ್ಯವಿಧಾನಗಳು ಎಂದು ಅರ್ಥ;

(ಜೆ) "ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳು" ಎಂಬುದು ಎಲ್ಲ ಪ್ರಸವಪೂರ್ವ ಪತ್ತೆ ಕಾರ್ಯವಿಧಾನಗಳನ್ನು ಮತ್ತು ಪ್ರಸವಪೂರ್ವ ಪತ್ತೆ ಪರೀಕ್ಷೆಗಳನ್ನು ಒಳಗೊಳ್ಳುತ್ತದೆ;

(ಕೆ) "ಪ್ರಸವಪೂರ್ವ ಪತ್ತೆ ಪರೀಕ್ಷೆ" ಎಂದರೆ ಆನುವಂಶೀಯ ಅಥವಾ ಜೀವದ್ರವ್ಯದ ವಿಕಾರಗಳನ್ನು ಅಥವಾ ವರ್ಣತಂತುವಿನ ವೈಪರೀತ್ಯಗಳನ್ನು ಅಥವಾ ಹುಟ್ಟಿನಿಂದ ಬರುವ ವಿರೂಪತೆಗಳನ್ನು ಅಥವಾ ರಕ್ತವರ್ಣಕ ಬೇನೆ ಅಥವಾ ಲಿಂಗ ವಿಕಾರವನ್ನು ಪತ್ತೆಹಚ್ಚಲು ಮಾಡಿದ ಗರ್ಭಿಣಿ ಮಹಿಳೆಯ ಅಥವಾ ಪಿಂಡದ ಶ್ರವಣಾತೀತ ಧ್ವನಿತರಂಗ ಚಿತ್ರಣ ಅಥವಾ ಭ್ರೂಣದ ಮೇಲಿನ ಮೊದಲನೆಯ ಪೊರೆಯ ದ್ರವದ, ಭ್ರೂಣದ ಹೊರಪೊರೆಯ ಮೇಲಿನ ಮೃದು ಲೋಮದ, ರಕ್ತದ ಅಥವಾ ಯಾವುದೇ ಅಂಗಾಂಶದ ಅಥವಾ ದ್ರವದ ಯಾವುದೇ ಪರೀಕ್ಷೆ ಅಥವಾ ವಿಶ್ಲೇಷಣೆ;

(ಎಲ್) 'ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ನೋಂದಾಯಿತ ವೈದ್ಯ ವೃತ್ತಿಗ" ಎಂದರೆ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ 2ನೇ ಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಿದಂತೆ ಯಾವುದೇ ಮಾನ್ಯತೆ ಪಡೆದ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ರಾಜ್ಯ ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ವೈದ್ಯ ವೃತ್ತಿಗ;

(ಎನ್) "ವಿನಿಯಮನಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಿದ ವಿನಿಯಮನಗಳು;

(ಓ) "ಲಿಂಗ ಆಯ್ಕೆ"ಯು ಗರ್ಭದ ನಿರ್ದಿಷ್ಟ ಲಿಂಗವನ್ನು ಖಚಿತಪಡಿಸಿಕೊಳ್ಳುವ ಅಥವಾ ಅದು ನಿರ್ದಿಷ್ಟ ಲಿಂಗದ್ದಾಗಿರುವುದೆಂಬ ಸಂಭವನೀಯತೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಯಾವುದೇ ಕಾರ್ಯವಿಧಾನವನ್ನು, ತಂತ್ರ ವಿಧಾನವನ್ನು, ಪರೀಕ್ಷೆಯನ್ನು ಅಥವಾ ಔಷಧಿ ನೀಡಿಕೆಯನ್ನು ಅಥವಾ ಔಷಧ ಸೂಚಿಯನ್ನು ಅಥವಾ ಯಾವುದೇ ಸೌಲಭ್ಯವನ್ನು ಒಳಗೊಳ್ಳುತ್ತದೆ;

(ಪಿ) "ಧ್ವನಿತರಂಗ ಚಿತ್ರಣ ತಜ್ಞ ಅಥವಾ ಬಿಂಬಚಿತ್ರಣ ತಜ್ಞ" ಎಂದರೆ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956ರ ಮೇರೆಗೆ ಮಾನ್ಯತೆ ಪಡೆದ ಯಾವುದಾದರೊಂದು ವೈದ್ಯಕೀಯ ಅರ್ಹತೆಗಳನ್ನು ಅಥವಾ ಶ್ರವಣಾತೀತ ಧ್ವನಿ ತರಂಗ ಚಿತ್ರಣ ಶಾಸ್ತ್ರದಲ್ಲಿ ಅಥವಾ

ಬಿಂಬಚಿತ್ರಣ ತಂತ್ರವಿಧಾನಗಳಲ್ಲಿ ಅಥವಾ ರೇಡಿಯೋ ವಿಕಿರಣ ಶಾಸ್ತ್ರದಲ್ಲಿ ಸ್ನಾತ್ತಕೋತ್ತರ ಪದವಿ ಹೊಂದಿರುವ ವ್ಯಕ್ತಿ;

(ಕ್ಯೂ) "ರಾಜ್ಯ ಮಂಡಲಿ" ಎಂದರೆ 16ಎ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಮೇಲ್ವಿಚಾರಣಾ ಮಂಡಲಿ ಅಥವಾ ಕೇಂದ್ರಾಡಳಿತ ಪ್ರದೇಶ ಮೇಲ್ವಿಚಾರಣಾ ಮಂಡಲಿ;

(ಆರ್) ವಿಧಾನಮಂಡಲವನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ, "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯು ನೇಮಕ ಮಾಡಿದ ಆ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ;

## ಅಧ್ಯಾಯ – II
## ಆನುವಂಶೀಯತೆ ಸಲಹಾ ಕೇಂದ್ರಗಳು, ಆನುವಂಶೀಯತೆ ಪ್ರಯೋಗಾಲಯಗಳು ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ವಿನಿಯಮನ

**3. ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ವಿನಿಯಮನ.–** ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭವಾದಂದಿನಿಂದ,–

(1) ಈ ಅಧಿನಿಯಮದ ಮೇರೆಗೆ ಯಾವುದೇ ಆನುವಂಶೀಯತೆ ಸಲಹಾ ಕೇಂದ್ರವು, ಅಥವಾ ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾ ಕೇಂದ್ರವು ನೋಂದಾಯಿತವಾಗಿದ್ದ ಹೊರತು ಅದು ಪ್ರಸವಪೂರ್ವ ಪತ್ತೆ ತಂತ್ರವಿಧಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಕೈಗೊಳ್ಳುವುದರಲ್ಲಿ ಭಾಗಿಯಾಗತಕ್ಕದ್ದಲ್ಲ ಅಥವಾ ಕೈಗೊಳ್ಳುವುದಕ್ಕೆ ಸಹಾಯ ಮಾಡತಕ್ಕದ್ದಲ್ಲ.

(2) ಯಾವುದೇ ಆನುವಂಶೀಯತೆ ಸಲಹಾ ಕೇಂದ್ರವು, ಅಥವಾ ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು, ನಿಯಮಿಸಬಹುದಾದ ಅರ್ಹತೆಗಳನ್ನು ಹೊಂದಿಲ್ಲದ ಯಾರೇ ವ್ಯಕ್ತಿಯನ್ನು ಗೌರವದ ಆಧಾರದ ಮೇಲೆ ಅಥವಾ ಸಂದಾಯದ ಮೇಲೆ ನಿಯೋಜಿಸಿಕೊಳ್ಳತಕ್ಕದ್ದಲ್ಲ ಅಥವಾ ನಿಯೋಜಿಸಿಕೊಳ್ಳುವಂತೆ ಮಾಡತಕ್ಕದ್ದಲ್ಲ ಅಥವಾ ಅವರ ಸೇವೆಯನ್ನು ಪಡೆಯತಕ್ಕದ್ದಲ್ಲ.

(3) ಯಾರೇ ಆನುವಂಶೀಯತೆ ವೈದ್ಯಶಾಸ್ತ್ರ ತಜ್ಞನು, ಸ್ತ್ರೀರೋಗ ತಜ್ಞನು, ಮಕ್ಕಳ ವೈದ್ಯ ತಜ್ಞನು, ನೋಂದಾಯಿತ ವೈದ್ಯ ವೃತ್ತಿಗನು ಅಥವಾ ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ನೋಂದಾಯಿತ ಸ್ಥಳವಲ್ಲದ ಯಾವುದೇ ಸ್ಥಳದಲ್ಲಿ ಯಾವುದೇ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು

ತಾನಾಗಿಯೇ ಆಗಲಿ ಅಥವಾ ಯಾರೇ ಇತರ ವ್ಯಕ್ತಿಯ ಮೂಲಕವಾಗಲಿ ಕೈಗೊಳ್ಳತಕ್ಕದ್ದಲ್ಲ ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದಲ್ಲ ಅಥವಾ ಕೈಗೊಳ್ಳುವುದಕ್ಕೆ ಸಹಾಯ ಮಾಡತಕ್ಕದ್ದಲ್ಲ.

**3ಎ. ಲಿಂಗ ಆಯ್ಕೆಯ ನಿಷೇಧ.–** ಬಂಜೆತನ ವಿಷಯ ಕ್ಷೇತ್ರದಲ್ಲಿರುವ ತಜ್ಞರನ್ನು ಅಥವಾ ತಜ್ಞರ ತಂಡವನ್ನು ಒಳಗೊಂಡಂತೆ ಯಾರೇ ವ್ಯಕ್ತಿಯು, ಮಹಿಳೆಯ ಅಥವಾ ಪುರುಷನ ಅಥವಾ ಅವರಿಬ್ಬರ ಮೇಲೆ ಅಥವಾ ಅವರಲ್ಲಿ ಯಾರಾದರೊಬ್ಬರಿಂದ ಅಥವಾ ಅವರಿಬ್ಬರಿಂದಲೂ ಪಡೆದ ಯಾವುದೇ ಅಂಗಾಂಶದ, ಭ್ರೂಣದ, ಪಿಂಡದ, ದ್ರವದ ಅಥವಾ ಅಂಡಾಣು– ವೀರ್ಯಾಣುಗಳ ಮೇಲೆ ಲಿಂಗ ಆಯ್ಕೆಯ ಪರೀಕ್ಷೆಯನ್ನು ತಾನಾಗಿಯೇ ಅಥವಾ ಯಾರೇ ಇತರ ವ್ಯಕ್ತಿಯ ಮೂಲಕ ಕೈಗೊಳ್ಳತಕ್ಕದ್ದಲ್ಲ ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದಲ್ಲ ಅಥವಾ ಕೈಗೊಳ್ಳುವುದಕ್ಕೆ ಸಹಾಯ ಮಾಡತಕ್ಕದ್ದಲ್ಲ.

**3ಬಿ. ಈ ಅಧಿನಿಯಮದ ಮೇರೆಗೆ ನೋಂದಾಯಿತರಾಗಿರದ ವ್ಯಕ್ತಿಗಳು, ಪ್ರಯೋಗಾಲಯಗಳು, ಚಿಕಿತ್ಸಾಲಯಗಳು, ಇತ್ಯಾದಿಗಳಿಗೆ ಶ್ರವಣಾತೀತ ಧ್ವನಿತರಂಗ ಚಿತ್ರಣ ಯಂತ್ರಗಳು, ಇತ್ಯಾದಿಗಳನ್ನು ಮಾರಾಟ ಮಾಡುವುದರ ಮೇಲೆ ನಿಷೇಧ.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ನೋಂದಾಯಿತರಾಗಿರದ ಯಾವುದೇ ಆನುವಂಶೀಯತೆ ಸಲಹಾ ಕೇಂದ್ರಕ್ಕೆ, ಆನುವಂಶೀಯತೆ ಪ್ರಯೋಗಾಲಯಕ್ಕೆ, ಆನುವಂಶೀಯತೆ ಚಿಕಿತ್ಸಾಲಯಕ್ಕೆ ಅಥವಾ ಯಾರೇ ಇತರ ವ್ಯಕ್ತಿಗೆ ಭ್ರೂಣದ ಲಿಂಗವನ್ನು ಪತ್ತೆ ಹಚ್ಚುವ ಸಾಮರ್ಥ್ಯವಿರುವ ಯಾವುದೇ ಶ್ರವಣಾತೀತ ಧ್ವನಿತರಂಗ ಚಿತ್ರಣ ಯಂತ್ರವನ್ನು ಅಥವಾ ಬಿಂಬಚಿತ್ರಣ ಯಂತ್ರವನ್ನು ಅಥವಾ ಕ್ಷಿಪ್ರ ವೀಕ್ಷಣಾ ಯಂತ್ರವನ್ನು ಅಥವಾ ಯಾವುದೇ ಇತರ ಸಲಕರಣೆಯನ್ನು ಮಾರಾಟ ಮಾಡತಕ್ಕದ್ದಲ್ಲ.

## ಅಧ್ಯಾಯ – III
## ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ ವಿನಿಯಮನ

**4. ಪ್ರಸವ ಪೂರ್ವ ಪತ್ತೆ ತಂತ್ರವಿಧಾನಗಳ ವಿನಿಯಮನ.–** ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ,–

(1) ನೋಂದಾಯಿತ ಆನುವಂಶೀಯತೆ ಸಲಹಾ ಕೇಂದ್ರವನ್ನು ಅಥವಾ ಆನುವಂಶೀಯತೆ ಪ್ರಯೋಗಾಲಯವನ್ನು ಅಥವಾ ಆನುವಂಶೀಯತೆ ಚಿಕಿತ್ಸಾಲಯವನ್ನು ಒಳಗೊಂಡಂತೆ ಯಾವುದೇ ಸ್ಥಳವನ್ನು (2)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಹೊರತು ಮತ್ತು (3)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಪಾಲಿಸದ ಹೊರತು ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಕೈಗೊಳ್ಳುವುದಕ್ಕೆ ಯಾರೇ ವ್ಯಕ್ತಿಯು ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸುವಂತೆ ಮಾಡತಕ್ಕದ್ದಲ್ಲ;

(2) ಯಾವುದೇ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಈ ಮುಂದಿನ ಯಾವುದೇ ವೈಪರೀತ್ಯತೆಗಳನ್ನು ಪತ್ತೆಹಚ್ಚುವ ಉದ್ದೇಶಗಳಿಗಾಗಿ ಹೊರತು ಕೈಗೊಳ್ಳತಕ್ಕದ್ದಲ್ಲ, ಎಂದರೆ:–

(i) ವರ್ಣತಂತುವಿನ ವೈಪರೀತ್ಯತೆಗಳು;

(ii) ಆನುವಂಶೀಯ ಜೀವದ್ರವ್ಯ ರೋಗಗಳು;

(iii) ರಕ್ತವರ್ಣಕ ಬೇನೆಗಳು;

(iv) ಲಿಂಗ ವಿಕಾರ ರೋಗಗಳು;

(v) ಹುಟ್ಟಿನಿಂದ ಬರುವ ಅಸಹಜತತೆಗಳು;

(vi) ಕೇಂದ್ರ ಮೇಲ್ವಿಚಾರಣಾ ಮಂಡಲಿಯು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವೈಪರೀತ್ಯತೆಗಳು ಅಥವಾ ರೋಗಗಳು.

(3) ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಉಪಯೋಗಿಸಲು ಅಥವಾ ಕೈಗೊಳ್ಳಲು ಅರ್ಹತೆ ಹೊಂದಿದ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಷರತ್ತುಗಳನ್ನು ಪೂರೈಸಲಾಗಿದೆ ಎಂದು ಅವನಿಗೆ ಮನದಟ್ಟಾಗಿ ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸದ ಹೊರತು, ಅಂಥ ತಂತ್ರ ವಿಧಾನಗಳನ್ನು ಉಪಯೋಗಿಸತಕ್ಕದ್ದಲ್ಲ, ಎಂದರೆ:–

(i) ಗರ್ಭಿಣಿ ಮಹಿಳೆಯ ವಯಸ್ಸು ಮೂವತ್ತೈದು ವರ್ಷಗಳಿಗಿಂತ ಹೆಚ್ಚಾಗಿರತಕ್ಕದ್ದು;

(ii) ಗರ್ಭಿಣಿ ಮಹಿಳೆಯು ಎರಡು ಅಥವಾ ಹೆಚ್ಚಿನ ಅನೈಚ್ಛಿಕ ಗರ್ಭಪಾತಗಳಿಗೆ ಒಳಗಾಗಿರತಕ್ಕದ್ದು ಅಥವಾ ಭ್ರೂಣಗಳನ್ನು ಕಳೆದುಕೊಂಡಿರತಕ್ಕದ್ದು;

(iii) ಗರ್ಭಿಣಿ ಮಹಿಳೆಯು ಔಷಧಗಳು, ವಿಕಿರಣ, ಸೋಂಕು ರೋಗ ಅಥವಾ ರಾಸಾಯನಿಕಗಳು ಮುಂತಾದವುಗಳಂಥ ಸಂಭವನೀಯ ವಿರೂಪ ಕಾರಕಗಳಿಗೆ ಒಳಗಾಗಿರತಕ್ಕದ್ದು;

(iv) ಗರ್ಭಿಣಿ ಮಹಿಳೆಯು ಅಥವಾ ಆಕೆಯ ಗಂಡನು ಬುದ್ಧಿಮಾಂದ್ಯತೆಯ ಅಥವಾ ಸ್ನಾಯು ಸೆಳೆತದಂಥ ದೈಹಿಕ ವಿಕಲತೆಗಳ ಅಥವಾ ಯಾವುದೇ ಇತರ ಆನುವಂಶೀಯತೆ ರೋಗದ ಕೌಟುಂಬಿಕ ಇತಿಹಾಸವನ್ನು ಹೊಂದಿರತಕ್ಕದ್ದು;

(v) ಕೇಂದ್ರ ಮೇಲ್ವಿಚಾರಣಾ ಮಂಡಲಿಯು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಷರತ್ತು:

ಪರಂತು, ಗರ್ಭಿಣಿ ಮಹಿಳೆಯ ಮೇಲೆ ಶ್ರವಣಾತೀತ ಧ್ವನಿತರಂಗ ಚಿತ್ರಣ ನಡೆಸಿದ ವ್ಯಕ್ತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಚಿಕಿತ್ಸಾಲಯದಲ್ಲಿ ಅದರ ಸಂಪೂರ್ಣ ದಾಖಲೆಯನ್ನು ಇಡತಕ್ಕದ್ದು, ಮತ್ತು ಅದರಲ್ಲಿ ಯಾವುದೇ ನ್ಯೂನತೆ ಅಥವಾ ಅಸಮರ್ಪಕತೆ ಕಂಡುಬಂದರೆ, ಅಂಥ ಶ್ರವಣಾತೀತ ಧ್ವನಿ ತರಂಗ ಚಿತ್ರಣವನ್ನು ನಡೆಸಿದ ವ್ಯಕ್ತಿಯು, ತದ್ವಿರುದ್ಧವಾದುದನ್ನು ರುಜುವಾತುಪಡಿಸದ ಹೊರತು ಹಾಗೆ ಶ್ರವಣಾತೀತ ಧ್ವನಿತರಂಗ ಚಿತ್ರಣ ನಡೆಸಿರುವುದು 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯಾಗತಕ್ಕದ್ದು.

(4) ಗರ್ಭಿಣಿ ಮಹಿಳೆಯ ಸಂಬಂಧಿ ಅಥವಾ ಗಂಡನೂ ಸೇರಿದಂತೆ, ಯಾರೇ ವ್ಯಕ್ತಿಯು (2)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಹೊರತು, ಆಕೆಯ ಮೇಲೆ ಯಾವುದೇ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಕೈಗೊಳ್ಳುವಂತೆ ಕೋರತಕ್ಕದ್ದಲ್ಲ ಅಥವಾ ಅದಕ್ಕೆ ಪ್ರೋತ್ಸಾಹಿಸತಕ್ಕದ್ದಲ್ಲ.

(5) ಮಹಿಳೆಯ ಸಂಬಂಧಿ ಅಥವಾ ಗಂಡನೂ ಸೇರಿದಂತೆ ಯಾರೇ ವ್ಯಕ್ತಿಯು ಆಕೆಯ ಅಥವಾ ಆತನ ಅಥವಾ ಅವರಿಬ್ಬರ ಮೇಲೆ ಯಾವುದೇ ಲಿಂಗ ಆಯ್ಕೆಯ ತಂತ್ರ ವಿಧಾನಗಳನ್ನು ಉಪಯೋಗಿಸುವಂತೆ ಕೋರತಕ್ಕದ್ದಲ್ಲ ಅಥವಾ ಅದಕ್ಕೆ ಪ್ರೋತ್ಸಾಹಿಸತಕ್ಕದ್ದಲ್ಲ.

**5. ಗರ್ಭಿಣಿ ಮಹಿಳೆಯ ಲಿಖಿತ ಸಮ್ಮತಿ ಮತ್ತು ಭ್ರೂಣದ ಲಿಂಗವನ್ನು ತಿಳಿಸುವುದಕ್ಕೆ ನಿಷೇಧ.–** (1) 3ನೇ ಪ್ರಕರಣದ (2)ನೇ ಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು,–

(ಎ) ಸಂಬಂಧಪಟ್ಟ ಗರ್ಭಿಣಿ ಮಹಿಳೆಗೆ ಅಂತಹ ಕಾರ್ಯವಿಧಾನಗಳ ಬಗ್ಗೆ ಎಲ್ಲ ಗೊತ್ತಿರುವ ಅಡ್ಡ ಪರಿಣಾಮಗಳನ್ನು ಮತ್ತು ನಂತರದ ಪರಿಣಾಮಗಳನ್ನು ವಿವರಿಸಿದ ಹೊರತು;

(ಬಿ) ಅಂತಹ ಕ್ರಮಕ್ಕೆ ಒಳಗಾಗುವುದರ ಬಗ್ಗೆ ಆಕೆಗೆ ತಿಳಿಯುವ ಭಾಷೆಯಲ್ಲಿ ಆಕೆಯಿಂದ ಲಿಖಿತ ಸಮ್ಮತಿಯನ್ನು ನಿಯಮಿಸಲಾದ ನಮೂನೆಯಲ್ಲಿ ಪಡೆದುಕೊಳ್ಳದ ಹೊರತು;

(ಸಿ) (ಬಿ) ಖಂಡದ ಮೇರೆಗೆ ಆಕೆಯಿಂದ ಪಡೆಯಲಾದ ಲಿಖಿತ ಸಮ್ಮತಿಯ ಪ್ರತಿಯನ್ನು ಗರ್ಭಿಣಿ ಮಹಿಳೆಗೆ ನೀಡಿದ ಹೊರತು

– ಪ್ರಸವಪೂರ್ವ ಪತ್ತೆ ಕಾರ್ಯವಿಧಾನಗಳನ್ನು ನಡೆಸತಕ್ಕದ್ದಲ್ಲ.

(2) ಪ್ರಸವಪೂರ್ವ ಪತ್ತೆ ಕಾರ್ಯವಿಧಾನವನ್ನು ನಡೆಸುವ ವ್ಯಕ್ತಿಯೂ ಸೇರಿದಂತೆ ಯಾರೇ ವ್ಯಕ್ತಿಯು, ಶಬ್ದಗಳ ಅಥವಾ ಸಂಕೇತಗಳ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಭ್ರೂಣದ

ಲಿಂಗವನ್ನು ಸಂಬಂಧಪಟ್ಟ ಗರ್ಭಿಣಿ ಮಹಿಳೆಗೆ ಅಥವಾ ಆಕೆಯ ಸಂಬಂಧಿಕರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

**6. ಲಿಂಗ ನಿರ್ಧರಣೆಯನ್ನು ನಿಷೇಧಿಸಲಾಗಿದೆ.–** ಈ ಅಧಿನಿಯಮದ ಪ್ರಾರಂಭದಂದು ಮತ್ತು ಪಾರಂಭದಿಂದ,–

(ಎ) ಯಾವುದೇ ಆನುವಂಶೀಯತೆ ಸಲಹಾ ಕೇಂದ್ರವು ಅಥವಾ ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು ತನ್ನ ಕೇಂದ್ರದಲ್ಲಿ, ಪ್ರಯೋಗಾಲಯದಲ್ಲಿ ಅಥವಾ ಚಿಕಿತ್ಸಾಲಯದಲ್ಲಿ ಭ್ರೂಣದ ಲಿಂಗ ನಿರ್ಧರಣೆಯ ಉದ್ದೇಶಕ್ಕಾಗಿ, ಶ್ರವಣಾತೀತ ಧ್ವನಿತರಂಗ ಚಿತ್ರಣವೂ ಸೇರಿದಂತೆ ಪ್ರಸವಪೂರ್ವ ಪತ್ತೆ ತಂತ್ರ ವಿಧಾನವನ್ನು ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ;

(ಬಿ) ಯಾರೇ ವ್ಯಕ್ತಿಯು ಭ್ರೂಣದ ಲಿಂಗನಿರ್ಧರಣೆಯ ಉದ್ದೇಶಕ್ಕಾಗಿ ಶ್ರವಣಾತೀತ ಧ್ವನಿತರಂಗ ಚಿತ್ರಣವೂ ಸೇರಿದಂತೆ ಯಾವುದೇ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದಲ್ಲ;

(ಸಿ) ಯಾರೇ ವ್ಯಕ್ತಿಯು ಗರ್ಭಧಾರಣೆಗೆ ಮುಂಚೆ ಅಥವಾ ಗರ್ಭಧಾರಣೆಯ ನಂತರ ಯಾವುದೇ ಸಾಧನಗಳ ಮೂಲಕ ಲಿಂಗ ಆಯ್ಕೆಯನ್ನು ಮಾಡಿಸತಕ್ಕದ್ದಲ್ಲ ಅಥವಾ ಮಾಡಿಸಲು ಅನುಮತಿಸತಕ್ಕದ್ದಲ್ಲ.

## ಅಧ್ಯಾಯ – IV

## ಕೇಂದ್ರ ಮೇಲ್ವಿಚಾರಣಾ ಮಂಡಲಿ

**7. ಕೇಂದ್ರ ಮೇಲ್ವಿಚಾರಣಾ ಮಂಡಲಿಯ ರಚನೆ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಮಂಡಲಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಕೇಂದ್ರ ಮೇಲ್ವಿಚಾರಣಾ ಮಂಡಲಿಯೆಂದು ಕರೆಯಲಾಗುವ ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಲಿಯಲ್ಲಿ,–

(ಎ) ಕುಟುಂಬ ಕಲ್ಯಾಣ ಮಂತ್ರಾಲಯದ ಅಥವಾ ಆ ಇಲಾಖೆಯ ಪ್ರಭಾರದಲ್ಲಿರುವ ಸಚಿವರು, ಅವನು ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಭಾರತ ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ, ಅವನು ಪದನಿಮಿತ್ತ ಉಪಾಧ್ಯಕ್ಷನಾಗಿರತಕ್ಕದ್ದು;

(ಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ, ಕಾನೂನು ಮತ್ತು ನ್ಯಾಯ ಮಂತ್ರಾಲಯದಲ್ಲಿರುವ ಕಾನೂನು ವ್ಯವಹಾರಗಳ ಇಲಾಖೆಯ ಅಥವಾ ವಿಧಾಯೀ ಇಲಾಖೆಯ ಮತ್ತು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿಯ ಪ್ರಭಾರದಲ್ಲಿರುವ ಕೇಂದ್ರ ಸರ್ಕಾರದ ಮಂತ್ರಾಲಯಗಳನ್ನು ಪ್ರತಿನಿಧಿಸುವುದಕ್ಕಾಗಿ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಮೂವರು ಸದಸ್ಯರು, ಪದನಿಮಿತ್ತ;

(ಡಿ) ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ ಮಹಾನಿರ್ದೇಶಕ, ಪದನಿಮಿತ್ತ ;

(ಇ) ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ, ಈ ಮುಂದಿನವರ ಪೈಕಿ ಇಬ್ಬರಂತೆ ಎಂದರೆ:–

(i) ಪ್ರಖ್ಯಾತ ವೈದ್ಯಕೀಯ ಆನುವಂಶೀಯತೆ ಶಾಸ್ತ್ರ ತಜ್ಞರು;

(ii) ಪ್ರಖ್ಯಾತ ಸ್ತ್ರೀರೋಗ ತಜ್ಞರು ಮತ್ತು ಪ್ರಸೂತಿ ಶಾಸ್ತ್ರ ತಜ್ಞರು ಅಥವಾ ಸ್ತ್ರೀರೋಗ ಅಥವಾ ಪ್ರಸೂತಿ ತಂತ್ರಜ್ಞರು;

(iii) ಪ್ರಖ್ಯಾತ ಮಕ್ಕಳ ವೈದ್ಯ ತಜ್ಞರು;

(iv) ಪ್ರಖ್ಯಾತ ಸಮಾಜ ವಿಜ್ಞಾನಿಗಳು; ಮತ್ತು

(v) ಮಹಿಳಾ ಕಲ್ಯಾಣ ಸಂಘ ಸಂಸ್ಥೆಗಳ ಪ್ರತಿನಿಧಿಗಳು

– ಒಟ್ಟು ಹತ್ತು ಜನ ಸದಸ್ಯರು;

(ಎಫ್) ಸಂಸತ್ತಿನ ಮೂವರು ಮಹಿಳಾ ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯಿಂದ ಮತ್ತು ಒಬ್ಬರನ್ನು ರಾಜ್ಯ ಸಭೆಯಿಂದ ಆಯ್ಕೆ ಮಾಡತಕ್ಕದ್ದು;

(ಜಿ) ರಾಜ್ಯಗಳನ್ನು ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳನ್ನು ಪ್ರತಿನಿಧಿಸುವುದಕ್ಕೆ ಸರದಿಯಂತೆ ಅಕಾರಾದಿ ಕ್ರಮದಲ್ಲಿ ಇಬ್ಬರಂತೆ ಮತ್ತು ವಿರುದ್ಧ ಅಕಾರಾದಿ ಕ್ರಮದಲ್ಲಿ ಇಬ್ಬರಂತೆ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ನಾಲ್ವರು ಸದಸ್ಯರು:

ಪರಂತು, ಈ ಖಂಡದ ಮೇರೆಗೆ ಯಾವುದೇ ನೇಮಕವನ್ನು ಸಂದರ್ಭಾನುಸಾರ, ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಶಿಫಾರಸ್ಸಿನ ಮೇರೆಗೆ ಹೊರತು ಮಾಡತಕ್ಕದ್ದಲ್ಲ;

(ಹೆಚ್) ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಜಂಟಿ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಿಲ್ಲದ ಅಥವಾ ಅದಕ್ಕೆ ಸಮಾನವಾಗಿರುವ ದರ್ಜೆಯ ಕೇಂದ್ರ ಸರ್ಕಾರದ ಅಧಿಕಾರಿ, ಅವನು ಪದನಿಮಿತ್ತ ಸದಸ್ಯ ಕಾರ್ಯದರ್ಶಿ

– ಇವರುಗಳನ್ನು ಒಳಗೊಂಡಿರತಕ್ಕದ್ದು.

**8. ಸದಸ್ಯರ ಪದಾವಧಿ.–** (1) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಇತರ ಸದಸ್ಯರ ಪದಾವಧಿಯು,–

(ಎ) 7ನೇ ಪ್ರಕರಣದ (2)ನೇ ಉಪ ಪ್ರಕರಣದ (ಇ) ಖಂಡದ ಅಥವಾ (ಎಫ್) ಖಂಡದ ಮೇರೆಗೆ ನೇಮಕ ಮಾಡಿದ್ದರೆ ಮೂರು ವರ್ಷಗಳಾಗಿರತಕ್ಕದ್ದು:

ಪರಂತು, 7ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಆಯ್ಕೆಯಾದ ಸದಸ್ಯರ ಪದಾವಧಿಯು, ಆ ಸದಸ್ಯರು ಮಂತ್ರಿಯಾದ ಅಥವಾ ರಾಜ್ಯ ಮಂತ್ರಿಯಾದ ಅಥವಾ ಉಪ ಮಂತ್ರಿಯಾದ ಅಥವಾ ಲೋಕಸಭೆಯ ಅಧ್ಯಕ್ಷರಾದ ಅಥವಾ ಉಪಾಧ್ಯಕ್ಷರಾದ ಅಥವಾ ರಾಜ್ಯ ಸಭೆಯ ಉಪ– ಸಭಾಪತಿಯಾದ ಕೂಡಲೇ ಅಥವಾ ಯಾವ ಸದನದಿಂದ ಆಕೆ ಆಯ್ಕೆಯಾಗಿರುವಳೋ ಆ ಸದನದ ಸದಸ್ಯೆಯಾಗಿರುವುದು ಮುಕ್ತಾಯವಾದ ಕೂಡಲೇ ಕೊನೆಗೊಳ್ಳತಕ್ಕದ್ದು; ಮತ್ತು

(ಬಿ) ಸದರಿ ಉಪಪ್ರಕರಣದ (ಜಿ) ಖಂಡದ ಮೇರೆಗೆ ನೇಮಕ ಮಾಡಿದ್ದರೆ ಒಂದು ವರ್ಷ ಆಗಿರತಕ್ಕದ್ದು.

(2) ಯಾರೇ ಇತರ ಸದಸ್ಯರ ಪದಾವಧಿಯಲ್ಲಿ, ಮರಣದ, ರಾಜೀನಾಮೆಯ ಅಥವಾ ಅನಾರೋಗ್ಯದ ಅಥವಾ ಇತರ ಅಸಮರ್ಥತೆಯ ಕಾರಣದಿಂದಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದ ಕಾರಣದಿಂದಾಗಿ ಆಕಸ್ಮಿಕ ಖಾಲಿಸ್ಥಾನ ಉಂಟಾದರೆ, ಅಂತಹ ಖಾಲಿಸ್ಥಾನವನ್ನು, ಕೇಂದ್ರ ಸರ್ಕಾರವು ಹೊಸದಾಗಿ ನೇಮಕ ಮಾಡುವ ಮೂಲಕ ತುಂಬತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಸದಸ್ಯನು, ಯಾವ ವ್ಯಕ್ತಿಯ ಸ್ಥಾನಕ್ಕೆ ಅವನು ನೇಮಕಗೊಂಡಿದ್ದಾನೋ ಆ ವ್ಯಕ್ತಿಯ ಉಳಿದ ಪದಾವಧಿಗೆ ಪದವನ್ನು ಧಾರಣ ಮಾಡತಕ್ಕದ್ದು.

(3) ಉಪಾಧ್ಯಕ್ಷನು, ಕಾಲಕಾಲಕ್ಕೆ ಅಧ್ಯಕ್ಷನು ತನಗೆ ವಹಿಸಬಹುದಾದಂತಹ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(4) ಸದಸ್ಯರು, ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**9. ಮಂಡಲಿಯ ಸಭೆಗಳು.-** (1) ಮಂಡಲಿಯು ವಿನಿಯಮನಗಳಲ್ಲಿ ಉಪಬಂಧಿಸ ಬಹುದಾದಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿ (ಅಂಥ ಸಭೆಗಳಲ್ಲಿನ ಕೋರಂ ಒಳಗೊಂಡಂತೆ) ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದಂತೆ ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಮಂಡಲಿಯು ಕನಿಷ್ಠ ಆರು ತಿಂಗಳಿಗೊಂದು ಸಲ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಮತ್ತು ಅವನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನು ಮಂಡಲಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(3) ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಮಂಡಲಿಯ ಯಾವುದೇ ಸಭೆಯಲ್ಲಿ ಹಾಜರಿರಲು ಅಸಮರ್ಥರಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರು ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

(5) ಪದನಿಮಿತ್ತ ಸದಸ್ಯರಲ್ಲದ ಇತರ ಸದಸ್ಯರು, ನಿಯಮಿಸಬಹುದಾದಂತಹ ಭತ್ಯೆಗಳು, ಯಾವುವಾದರೂ ಇದ್ದರೆ, ಅವುಗಳನ್ನು ಮಂಡಲಿಯಿಂದ ಪಡೆಯತಕ್ಕದ್ದು.

**10. ಖಾಲಿಸ್ಥಾನಗಳು, ಇತ್ಯಾದಿಯು ಮಂಡಲಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.-** ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು,-

(ಎ) ಮಂಡಲಿಯಲ್ಲಿ ಯಾವುದೇ ಖಾಲಿಸ್ಥಾನವು ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನ್ಯತೆಯ; ಅಥವಾ

(ಬಿ) ಮಂಡಲಿಯ ಸದಸ್ಯನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ನೇಮಕದಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟುಮಾಡದ ಮಂಡಲಿಯ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷದ

– ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**11. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹಯೋಗ.–** (1) ಮಂಡಲಿಯು, ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಕಾರ್ಯಗತ ಗೊಳಿಸುವಲ್ಲಿ ಯಾವ ವ್ಯಕ್ತಿಯ ನೆರವನ್ನು ಅಥವಾ ಸಲಹೆಯನ್ನು ಪಡೆಯಲು ಇಚ್ಛಿಸುವುದೋ ಆ ವ್ಯಕ್ತಿಯೊಂದಿಗೆ ತಾನು ಸಹಯೋಗ ಹೊಂದಬಹುದು.

(2) ಯಾವುದೇ ಉದ್ದೇಶಕ್ಕಾಗಿ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹಯೋಗ ಹೊಂದಿರುವ ವ್ಯಕ್ತಿಯು, ಆ ಉದ್ದೇಶಕ್ಕೆ ಸುಸಂಬದ್ಧವೆನಿಸುವ ಚರ್ಚೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಮಂಡಲಿಯ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕದ್ದಲ್ಲ.

**12. ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ.–** (1) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕೆ ಸಮರ್ಥಗೊಳಿಸುವ ಉದ್ದೇಶಕ್ಕಾಗಿ, ಮಂಡಲಿಯು ಈ ಬಗ್ಗೆ ರಚಿಸಬಹುದಾದಂತಹ ವಿನಿಯಮನಗಳಿಗೆ ಒಳಪಟ್ಟು, ತಾನು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು (ಪ್ರತಿನಿಯೋಜನೆ ಮೇಲಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ) ನೇಮಕ ಮಾಡಬಹುದು:

ಪರಂತು, ಅಂಥ ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರವರ್ಗದ ಅಧಿಕಾರಿಗಳ ನೇಮಕವು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(2) ಮಂಡಲಿಯು ನೇಮಕ ಮಾಡಿದ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಸಂಭಾವನೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**13. ಮಂಡಲಿಯ ಆದೇಶಗಳ ಮತ್ತು ಇತರ ಪತ್ರಗಳ ಅಧಿಪ್ರಮಾಣೀಕರಣ.–** ಮಂಡಲಿಯ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಈ ಬಗ್ಗೆ ಮಂಡಲಿಯು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಮಂಡಲಿಯು ಹೊರಡಿಸಿದ ಎಲ್ಲ ಇತರ ಪತ್ರಗಳನ್ನು ಸದಸ್ಯ ಕಾರ್ಯದರ್ಶಿಯ ಅಥವಾ ಈ ಬಗ್ಗೆ ಅಂತಹುದೇ ರೀತಿಯಲ್ಲಿ ಅಧಿಕೃತಗೊಳಿಸಿದ ಮಂಡಲಿಯ ಯಾರೇ ಇತರ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

**14. ಸದಸ್ಯನಾಗಿ ನೇಮಕಗೊಳ್ಳುವುದಕ್ಕೆ ಅನರ್ಹತೆಗಳು.–** ಒಬ್ಬ ವ್ಯಕ್ತಿಯು, ಅವನು,–

(ಎ) ನೈತಿಕ ಅಧಃಪತನವನ್ನು ಒಳಗೊಳ್ಳುವ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ, ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಕಾರಾವಾಸಕ್ಕೆ ಒಳಗಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥ ಮನಸ್ಸಿನವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ; ಅಥವಾ

(ಡಿ) ಸರ್ಕಾರದ ಅಥವಾ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ನಿಗಮದ ಸೇವೆಯಿಂದ ಅವನನ್ನು ತೆಗೆದುಹಾಕಿದ್ದರೆ ಅಥವಾ ವಜಾ ಮಾಡಿದ್ದರೆ; ಅಥವಾ

(ಇ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಸದಸ್ಯನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂತೆ ಮಂಡಲಿಯಲ್ಲಿ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಲಿಂಗ ನಿರ್ಧಾರಣೆಗಾಗಿ ಪ್ರಸವಪೂರ್ವ ಪತ್ತೆ ತಂತ್ರ ವಿಧಾನದ ಅಥವಾ ಯಾವುದೇ ಲಿಂಗ ಆಯ್ಕೆಯ ತಂತ್ರ ವಿಧಾನದ ಉಪಯೋಗದಲ್ಲಿ ಅಥವಾ ಅದಕ್ಕೆ ಉತ್ತೇಜನ ಕೊಡುವುದರಲ್ಲಿ ಸಹಭಾಗಿಯಾಗಿದ್ದರೆ

– ಸದಸ್ಯನಾಗಿ ನೇಮಕವಾಗುವುದಕ್ಕೆ ಅನರ್ಹನಾಗತಕ್ಕದ್ದು.

**15. ಮರುನೇಮಕಕ್ಕೆ ಸದಸ್ಯನಿಗೆ ಇರಬೇಕಾದ ಅರ್ಹತೆ.–** ಸದಸ್ಯನಾಗಿರುವುದು ಮುಕ್ತಾಯಗೊಂಡ ಯಾರೇ ವ್ಯಕ್ತಿಯು ನಿಯಮಿಸಬಹುದಾದ ಇತರ ಸೇವಾ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಅಂತಹ ಸದಸ್ಯನಾಗಿ ಮರು ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು:

ಪರಂತು, ಪದನಿಮಿತ್ತ ಸದಸ್ಯನಲ್ಲದ ಇತರ ಯಾರೇ ಸದಸ್ಯನನ್ನು, ನಿರಂತರ ಎರಡು ಅವಧಿಗಳಿಗಿಂತ ಹೆಚ್ಚು ಅವಧಿಗೆ ನೇಮಕ ಮಾಡತಕ್ಕದ್ದಲ್ಲ.

**16. ಮಂಡಲಿಯ ಪ್ರಕಾರ್ಯಗಳು.–** ಮಂಡಲಿಯು, ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ, ಲಿಂಗ ಆಯ್ಕೆ ತಂತ್ರ ವಿಧಾನಗಳ ಉಪಯೋಗಕ್ಕೆ ಮತ್ತು ಅವುಗಳ ದುರುಪಯೋಗದ ವಿರುದ್ಧ ರೂಪಿಸಬೇಕಾದ ಕಾರ್ಯನೀತಿ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ii) ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅನುಷ್ಠಾನವನ್ನು ಪುನರವಲೋಕಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಮತ್ತು ಸದರಿ ಅಧಿನಿಯಮ ಮತ್ತು ನಿಯಮಗಳಲ್ಲಿ ಮಾಡಬೇಕಾದ ಬದಲಾವಣೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(iii) ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಯ ಮತ್ತು ಹೆಣ್ಣು ಭ್ರೂಣ ಹತ್ಯೆಗೆ ಕಾರಣವಾಗುವ ಪ್ರಸವಪೂರ್ವ ಲಿಂಗ ನಿರ್ಧರಣೆ ಪದ್ಧತಿಯ ವಿರುದ್ಧ ಸಾರ್ವಜನಿಕ ಅರಿವು ಮೂಡಿಸುವುದು;

(iv) ಆನುವಂಶೀಯತೆ ಸಲಹಾ ಕೇಂದ್ರಗಳಲ್ಲಿ, ಆನುವಂಶೀಯತೆ ಪ್ರಯೋಗಾಲಯಗಳಲ್ಲಿ ಮತ್ತು ಆನುವಂಶೀಯತೆ ಚಿಕಿತ್ಸಾಲಯದಲ್ಲಿ ಕೆಲಸಮಾಡುವ ವ್ಯಕ್ತಿಗಳು ಅನುಸರಿಸಬೇಕಾದ ನೀತಿ ಸಂಹಿತೆಯನ್ನು ಗೊತ್ತುಪಡಿಸುವುದು;

(v) ಅಧಿನಿಯಮದ ಮೇರೆಗೆ ರಚಿತವಾದ ವಿವಿಧ ಸಂಸ್ಥೆಗಳ ಕಾರ್ಯಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಅದರ ಸೂಕ್ತ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(vi) ಈ ಅಧಿನಿಯಮದ ಮೇರೆಗೆ ನಿರ್ದಿಷ್ಟಪಡಿಸಬಹುದಾದ ಯಾವುವೇ ಇತರ ಪ್ರಕಾರ್ಯಗಳು.

**16ಎ. ರಾಜ್ಯ ಮೇಲ್ವಿಚಾರಣಾ ಮಂಡಲಿ ಮತ್ತು ಒಕ್ಕೂಟ ರಾಜ್ಯಕ್ಷೇತ್ರದ ಮೇಲ್ವಿಚಾರಣಾ ಮಂಡಲಿಯ ರಚನೆ:–** (1) ವಿಧಾನಮಂಡಲವನ್ನು ಹೊಂದಿರುವ ಪ್ರತಿಯೊಂದು ರಾಜ್ಯವು ಮತ್ತು ಒಕ್ಕೂಟ ರಾಜ್ಯಕ್ಷೇತ್ರವು, ಸಂದರ್ಭಾನುಸಾರ, ರಾಜ್ಯ ಮೇಲ್ವಿಚಾರಣಾ ಮಂಡಲಿ ಎಂದು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಮೇಲ್ವಿಚಾರಣಾ ಮಂಡಲಿ ಎಂದು ಕರೆಯಲಾಗುವ ಮಂಡಲಿಯನ್ನು ರಚಿಸತಕ್ಕದ್ದು, ಅದು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು:–

(i) ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಯ ಮತ್ತು ಹೆಣ್ಣು ಭ್ರೂಣಹತ್ಯೆಗೆ ಕಾರಣವಾಗುವ ಭ್ರೂಣದ ಪ್ರಸವಪೂರ್ವ ಲಿಂಗನಿರ್ಧರಣೆ ಪದ್ಧತಿಯ ವಿರುದ್ಧ ರಾಜ್ಯದಲ್ಲಿ ಸಾರ್ವಜನಿಕ ಅರಿವು ಮೂಡಿಸುವುದು;

(ii) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುಚಿತ ಪ್ರಾಧಿಕಾರಗಳ ಚಟುವಟಿಕೆಗಳನ್ನು ಪುನರವಲೋಕಿಸುವುದು ಮತ್ತು ಅವುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುವುದು;

(iii) ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ನಡೆಸುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಮಂಡಲಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು;

(iv) ಅಧಿನಿಯಮದ ಮೇರೆಗೆ ರಾಜ್ಯದಲ್ಲಿ ಕೈಗೊಳ್ಳಲಾದ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಕ್ರೋಡೀಕೃತ ವರದಿಗಳನ್ನು ಮಂಡಲಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು; ಮತ್ತು

(v) ಈ ಅಧಿನಿಯಮದ ಮೇರೆಗೆ ನಿಯಮಿಸಬಹುದಾದ ಯಾವುದೇ ಇತರ ಪ್ರಕಾರ್ಯಗಳು.

(2) ರಾಜ್ಯ ಮಂಡಲಿಯು,–

(ಎ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಪ್ರಭಾರದಲ್ಲಿರುವ ಮಂತ್ರಿ, – ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ – ಪದನಿಮಿತ್ತ ಉಪಾಧ್ಯಕ್ಷನಾಗಿರತಕ್ಕದ್ದು;

(ಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ, ಕಾನೂನು ಮತ್ತು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಗಳ ಪ್ರಭಾರದಲ್ಲಿರುವ ಕಾರ್ಯದರ್ಶಿಗಳು ಅಥವಾ ಆಯುಕ್ತರು, ಪದನಿಮಿತ್ತ ಅಥವಾ ಅವರ ಪ್ರತಿನಿಧಿಗಳು;

(ಡಿ) ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಥವಾ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕ, ಪದನಿಮಿತ್ತ;

(ಇ) ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಮೂವರು ಮಹಿಳಾ ಸದಸ್ಯರು;

(ಎಫ್) ರಾಜ್ಯ ಸರ್ಕಾರವು ನೇಮಕ ಮಾಡಬೇಕಾದ ಈ ಮುಂದಿನ ಪ್ರವರ್ಗಗಳ ಪೈಕಿ ಪ್ರತಿಯೊಂದರಿಂದ ಇಬ್ಬರಂತೆ ಎಂದರೆ,–

(i) ಪ್ರಖ್ಯಾತ ಸಮಾಜ ವಿಜ್ಞಾನಿಗಳು ಮತ್ತು ಕಾನೂನು ತಜ್ಞರು;

(ii) ಸರ್ಕಾರೇತರ ಸಂಸ್ಥೆಗಳಿಂದ ಅಥವಾ ಇತರೆ ಪ್ರಖ್ಯಾತ ಮಹಿಳಾ ಕಾರ್ಯಕರ್ತರು;

(iii) ಪ್ರಖ್ಯಾತ ಸ್ತ್ರೀರೋಗ ಮತ್ತು ಪ್ರಸೂತಿ ಶಾಸ್ತ್ರ ತಜ್ಞರು ಅಥವಾ ಸ್ತ್ರೀರೋಗ ಅಥವಾ ಪ್ರಸೂತಿ ತಜ್ಞರು;

(iv) ಪ್ರಖ್ಯಾತ ಮಕ್ಕಳ ವೈದ್ಯ ತಜ್ಞರು ಅಥವಾ ಆನುವಂಶೀಯ ವೈದ್ಯ ತಜ್ಞರು;

(v) ಪ್ರಖ್ಯಾತ ವಿಕಿರಣಶಾಸ್ತ್ರ ತಜ್ಞರು ಅಥವಾ ಧ್ವನಿತರಂಗ ಚಿತ್ರಣ ತಜ್ಞರು

– ಒಟ್ಟು ಹತ್ತು ಜನ ಸದಸ್ಯರು.

(ಜಿ) ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿ, ಇವನು ಪದನಿಮಿತ್ತ ಸದಸ್ಯ ಕಾರ್ಯದರ್ಶಿ

– ಇವರುಗಳನ್ನು ಒಳಗೊಂಡಿರತಕ್ಕದ್ದು.

(3) ರಾಜ್ಯ ಮಂಡಲಿಯು ಕೊನೇಪಕ್ಷ ನಾಲ್ಕು ತಿಂಗಳುಗಳಿಗೊಮ್ಮೆ ಸಭೆ ಸೇರತಕ್ಕದ್ದು

(4) ಪದನಿಮಿತ್ತ ಸದಸ್ಯನಲ್ಲದ ಸದಸ್ಯನ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು.

(5) ಪದನಿಮಿತ್ತ ಸದಸ್ಯನಲ್ಲದ ಯಾರೇ ಸದಸ್ಯನ ಪದವು ಖಾಲಿಯಾದರೆ ಅದನ್ನು ಹೊಸ ನೇಮಕ ಮಾಡಿಕೊಳ್ಳುವ ಮೂಲಕ ಭರ್ತಿಮಾಡತಕ್ಕದ್ದು.

(6) ರಾಜ್ಯ ಮಂಡಲಿಯ ಸದಸ್ಯೆಯಾಗಿರುವ ವಿಧಾನಸಭೆಯ ಸದಸ್ಯೆಯು ಅಥವಾ ವಿಧಾನ ಪರಿಷತ್ತಿನ ಸದಸ್ಯೆಯು ಮಂತ್ರಿಯಾದರೆ ಅಥವಾ ವಿಧಾನಸಭಾಧ್ಯಕ್ಷೆಯಾದರೆ ಅಥವಾ ಉಪಾಧ್ಯಕ್ಷೆಯಾದರೆ ಅಥವಾ ವಿಧಾನ ಪರಿಷತ್ತಿನ ಸಭಾಪತಿಯಾದರೆ ಅಥವಾ ಉಪ ಸಭಾಪತಿಯಾದರೆ, ಆಕೆಯು ರಾಜ್ಯ ಮಂಡಲಿಯ ಸದಸ್ಯೆಯಾಗಿರುವುದು ನಿಂತುಹೋಗತಕ್ಕದ್ದು.

(7) ಕೋರಂ ಆಗಲು ರಾಜ್ಯ ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಇರತಕ್ಕದ್ದು.

(8) ರಾಜ್ಯ ಮಂಡಲಿಯು ಅಗತ್ಯವೆನಿಸಿದಾಗ ಸಹ–ಸದಸ್ಯನನ್ನು ಸೇರಿಸಿಕೊಳ್ಳಬಹುದು, ಪರಂತು ಹಾಗೆ ಸೇರಿಸಿಕೊಂಡ ಸಹ–ಸದಸ್ಯರ ಸಂಖ್ಯೆಯು ರಾಜ್ಯ ಮಂಡಲಿಯ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

(9) ಹಾಗೆ ಸೇರಿಸಿಕೊಳ್ಳಲಾದ ಸಹ–ಸದಸ್ಯರು, ಮತ ಚಲಾಯಿಸುವ ಹಕ್ಕನ್ನು ಹೊರತುಪಡಿಸಿ, ಇತರ ಸದಸ್ಯರು ಹೊಂದಿರುವಂಥವೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು ಮತ್ತು ನಿಯಮಗಳಿಗೆ ಮತ್ತು ವಿನಿಯಮನಗಳಿಗೆ ಬದ್ಧರಾಗಿರತಕ್ಕದ್ದು.

(10) ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರದ ವಿಷಯಗಳಿಗೆ ಸಂಬಂಧಿಸಿದಂತೆ, ರಾಜ್ಯ ಮಂಡಲಿಯು ಮಂಡಲಿಗೆ ಅನ್ವಯವಾಗುವಂಥ ಪ್ರಕ್ರಿಯೆಗಳನ್ನು ಮತ್ತು ಷರತ್ತುಗಳನ್ನು ಅನುಸರಿಸತಕ್ಕದ್ದು.

## ಅಧ್ಯಾಯ – V

## ಸಮುಚಿತ ಪ್ರಾಧಿಕಾರ ಮತ್ತು ಸಲಹಾ ಸಮಿತಿ

**17. ಸಮುಚಿತ ಪ್ರಾಧಿಕಾರ ಮತ್ತು ಸಲಹಾ ಸಮಿತಿ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರತಿಯೊಂದು ಒಕ್ಕೂಟ ರಾಜ್ಯಕ್ಷೇತ್ರಗಳಿಗಾಗಿ ಒಬ್ಬ ಅಥವಾ ಹೆಚ್ಚು ಸಮುಚಿತ ಪ್ರಾಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಹೆಣ್ಣು ಭ್ರೂಣಹತ್ಯೆಗೆ ಕಾರಣವಾಗುವ ಪ್ರಸವಪೂರ್ವ ಲಿಂಗ ನಿರ್ಧರಣೆಯ ಸಮಸ್ಯೆಯ ತೀವ್ರತೆಯನ್ನು ಗಮನದಲ್ಲಿರಿಸಿಕೊಂಡು ಈ ಅಧಿನಿಯಮದ ಉದ್ದೇಶಗಳಿಗಾಗಿ ಇಡೀ ರಾಜ್ಯಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಒಬ್ಬ ಅಥವಾ ಹೆಚ್ಚು ಸಮುಚಿತ ಪ್ರಾಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಸಮುಚಿತ ಪ್ರಾಧಿಕಾರಿಗಳಾಗಿ ನೇಮಕಗೊಂಡ ಅಧಿಕಾರಿಗಳಲ್ಲಿ,–

(ಎ) ಇಡೀ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ನೇಮಕಗೊಂಡಾಗ, ಈ ಮುಂದಿನ ಮೂವರು ಸದಸ್ಯರು ಇರತಕ್ಕದ್ದು,–

(i) ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಜಂಟಿ ನಿರ್ದೇಶಕನ ದರ್ಜೆಯ ಅಧಿಕಾರಿ ಅಥವಾ ಆ ದರ್ಜೆಗಿಂತ ಮೇಲ್ಪಟ್ಟ ಅಧಿಕಾರಿ – ಅಧ್ಯಕ್ಷ;

(ii) ಮಹಿಳಾ ಸಂಘಸಂಸ್ಥೆಯನ್ನು ಪ್ರತಿನಿಧಿಸುವ ಒಬ್ಬ ಪ್ರಖ್ಯಾತ ಮಹಿಳೆ; ಮತ್ತು

(iii) ಸಂಬಂಧಪಟ್ಟ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಕಾನೂನು ಇಲಾಖೆಯ ಅಧಿಕಾರಿ:

ಪರಂತು, ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ನಿಯಂತ್ರಣ ಮತ್ತು ದುರುಪಯೋಗ ಪ್ರತಿಬಂಧ) ತಿದ್ದುಪಡಿ ಅಧಿನಿಯಮ, 2002 ಜಾರಿಗೆ ಬಂದ ನಂತರ ಮೂರು ತಿಂಗಳುಗಳೊಳಗೆ ರಾಜ್ಯಮಟ್ಟದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಮಟ್ಟದ ಬಹು ಸದಸ್ಯ ಸಮುಚಿತ ಪ್ರಾಧಿಕಾರವನ್ನು ರಚಿಸುವುದು ಸಂಬಂಧಪಟ್ಟ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಕರ್ತವ್ಯವಾಗಿರತಕ್ಕದ್ದು:

ಮತ್ತೂ ಪರಂತು, ಅದರಲ್ಲಿ ಯಾವುದೇ ಖಾಲಿಸ್ಥಾನ ಉಂಟಾದರೆ, ಅದು ಖಾಲಿಯಾದ ಮೂರು ತಿಂಗಳುಗಳೊಳಗೆ ಭರ್ತಿ ಮಾಡತಕ್ಕದ್ದು.

(ಬಿ) ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಯಾವುದೇ ಭಾಗಕ್ಕೆ ನೇಮಕ ಮಾಡಿದಾಗ, ಸಂದರ್ಭಾನುಸಾರ, ಅವರು ರಾಜ್ಯ ಸರ್ಕಾರವು ಅಥವಾ ಒಕ್ಕೂಟ ರಾಜ್ಯಕ್ಷೇತ್ರವು ಸೂಕ್ತವೆಂದು ತಾನು ಭಾವಿಸಬಹುದಾದಂಥ ಇತರ ದರ್ಜೆಯವರಾಗಿರತಕ್ಕದ್ದು.

(4) ಸಮುಚಿತ ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಆನುವಂಶೀಯತೆ ಸಲಹಾ ಕೇಂದ್ರದ, ಆನುವಂಶೀಯತೆ ಪ್ರಯೋಗಾಲಯದ ಅಥವಾ ಆನುವಂಶೀಯತೆ ಚಿಕಿತ್ಸಾಲಯದ ನೋಂದಣಿಯನ್ನು ಮಂಜೂರು ಮಾಡುವುದು, ಅದನ್ನು ಅಮಾನತ್ತಿನಲ್ಲಿಡುವುದು ಅಥವಾ ಅದನ್ನು ರದ್ದುಗೊಳಿಸುವುದು;

(ಬಿ) ಆನುವಂಶೀಯತೆ ಸಲಹಾ ಕೇಂದ್ರಕ್ಕಾಗಿ, ಆನುವಂಶೀಯತೆ ಪ್ರಯೋಗಾಲಯಕ್ಕಾಗಿ ಅಥವಾ ಆನುವಂಶೀಯತೆ ಚಿಕಿತ್ಸಾಲಯಕ್ಕೆ ನಿಯಮಿಸಿದ ಗುಣಮಟ್ಟಗಳನ್ನು ಜಾರಿಗೊಳಿಸುವುದು;

(ಸಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿದ ದೂರುಗಳನ್ನು ತನಿಖೆ ಮಾಡುವುದು ಮತ್ತು ತಕ್ಷಣ ಕ್ರಮ ಕೈಗೊಳ್ಳುವುದು;

(ಡಿ) ನೋಂದಣಿಗೆ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ನೋಂದಣಿಯ ಅಮಾನತ್ತಿಗೆ ಅಥವಾ ರದ್ದಿಯಾತಿಗೆ ನೀಡಿದ ದೂರುಗಳ ಮೇಲೆ, (5)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಸಲಹಾ ಸಮಿತಿಯ ಸಲಹೆಯನ್ನು ಕೋರುವುದು ಮತ್ತು ಪರಿಗಣಿಸುವುದು;

(ಇ) ಯಾವುದೇ ಸ್ಥಳದಲ್ಲಿ ಯಾರೇ ವ್ಯಕ್ತಿಯಿಂದ ಯಾವುದೇ ಲಿಂಗ ಆಯ್ಕೆ ತಂತ್ರವಿಧಾನದ ಉಪಯೋಗದ ವಿರುದ್ಧ ತಾನಾಗಿಯೇ ಅಥವಾ ತನ್ನ ಗಮನಕ್ಕೆ ಅದನ್ನು ತಂದಾಗ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ಅಂಥ ವಿಷಯದಲ್ಲಿ ಪ್ರತ್ಯೇಕ ತನಿಖೆಗಳನ್ನು ಸಹ ಆರಂಭಿಸುವುದು;

(ಎಫ್) ಲಿಂಗ ಆಯ್ಕೆಯ ಅಥವಾ ಪ್ರಸವಪೂರ್ವ ಲಿಂಗ ನಿರ್ಧರಣೆ ಪದ್ಧತಿಯ ವಿರುದ್ಧ ಸಾರ್ವಜನಿಕ ಅರಿವನ್ನು ಮೂಡಿಸುವುದು;

(ಜಿ) ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳ ಅನುಷ್ಠಾನದ ಮೇಲ್ವಿಚಾರಣೆ ನಡೆಸುವುದು;

(ಹೆಚ್) ತಂತ್ರಜ್ಞಾನದಲ್ಲಿ ಅಥವಾ ಸಾಮಾಜಿಕ ಸ್ಥಿತಿಗತಿಗಳಲ್ಲಿ ಆದ ಬದಲಾವಣೆಗಳಿಗೆ ಅನುಸಾರವಾಗಿ ನಿಯಮಗಳಲ್ಲಿ ಅಗತ್ಯವಾದ ಮಾರ್ಪಾಟುಗಳನ್ನು ಕೇಂದ್ರೀಯ ಮೇಲ್ವಿಚಾರಣಾ ಮಂಡಲಿಗೆ ಮತ್ತು ರಾಜ್ಯ ಮಂಡಲಿಗಳಿಗೆ ಶಿಫಾರಸ್ಸು ಮಾಡುವುದು;

(ಐ) ಫಿರ್ಯಾದಿನ ತನಿಖೆಯ ನಂತರ ನೋಂದಣಿಯ ಅಮಾನತಿಗಾಗಿ ಅಥವಾ ರದ್ದಿಯಾತಿಗಾಗಿ ಸಲಹಾ ಸಮಿತಿಯು ಮಾಡಿದ ಶಿಫಾರಸ್ಸುಗಳ ಬಗ್ಗೆ ಕ್ರಮ ಕೈಗೊಳ್ಳುವುದು;

(5) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು, ಸಮುಚಿತ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಅದಕ್ಕೆ ನೆರವು ಮತ್ತು ಸಲಹೆಯನ್ನು ನೀಡುವುದಕ್ಕಾಗಿ, ಪ್ರತಿಯೊಂದು ಸಮುಚಿತ ಪ್ರಾಧಿಕಾರಕ್ಕಾಗಿ ಒಂದು ಸಲಹಾ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಸಲಹಾ ಸಮಿತಿಯ ಸದಸ್ಯರಲ್ಲಿ ಒಬ್ಬನನ್ನು ಅದರ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು.

(6) ಸಲಹಾ ಸಮಿತಿಯು,–

(ಎ) ಸ್ತ್ರೀರೋಗ ತಜ್ಞರು, ಪ್ರಸೂತಿ ಶಾಸ್ತ್ರ ತಜ್ಞರು, ಮಕ್ಕಳ ವೈದ್ಯ ತಜ್ಞರು ಮತ್ತು ಆನುವಂಶೀಯ ವೈದ್ಯ ತಜ್ಞರ ಪೈಕಿ ಮೂವರು ವೈದ್ಯಕೀಯ ತಜ್ಞರನ್ನು;

(ಬಿ) ಒಬ್ಬರು ಕಾನೂನು ತಜ್ಞರನ್ನು;

(ಸಿ) ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ, ಒಕ್ಕೂಟ ರಾಜ್ಯಕ್ಷೇತ್ರದ ವಾರ್ತಾ ಮತ್ತು ಪ್ರಚಾರ ವಿಷಯಗಳನ್ನು ನೋಡಿಕೊಳ್ಳುವ ಇಲಾಖೆಯನ್ನು ಪ್ರತಿನಿಧಿಸುವ ಒಬ್ಬ ಅಧಿಕಾರಿಯನ್ನು;

(ಡಿ) ಮೂವರು ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರನ್ನು, ಅವರ ಪೈಕಿ ಮಹಿಳಾ ಸಂಘಸಂಸ್ಥೆಗಳ ಪ್ರತಿನಿಧಿಗಳ ಪೈಕಿ ಕೊನೇಪಕ್ಷ ಒಬ್ಬರನ್ನು

– ಒಳಗೊಂಡಿರತಕ್ಕದ್ದು.

(7) ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನವನ್ನು ಲಿಂಗ ನಿರ್ಧರಣೆಗಾಗಿ ಅಥವಾ ಲಿಂಗ ಆಯ್ಕೆಗಾಗಿ ಉಪಯೋಗಿಸುವ ಅಥವಾ ಉತ್ತೇಜಿಸುವ ಕೆಲಸದಲ್ಲಿ ತೊಡಗಿರುವ ಯಾರೇ ವ್ಯಕ್ತಿಯನ್ನು ಸಲಹಾ ಸಮಿತಿಯ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(8) ಸಲಹಾ ಸಮಿತಿಯು ನೋಂದಣಿಗಾಗಿ ಬಂದ ಯಾವುದೇ ಅರ್ಜಿಯ ಅಥವಾ ನೋಂದಣಿಯ ಅಮಾನತ್ತಿಗೆ ಅಥವಾ ರದ್ದಿಯಾತಿಗೆ ಸಲ್ಲಿಸಿದ ಯಾವುದೇ ಫಿರ್ಯಾದಿನ ಪರಿಶೀಲನೆಗಾಗಿ ಮತ್ತು ಅದರ ಬಗ್ಗೆ ಸಲಹೆಯನ್ನು ನೀಡುವುದಕ್ಕೆ ತಾನು ಸೂಕ್ತವೆಂದು ಭಾವಿಸಿದಾಗಲೆಲ್ಲಾ ಅಥವಾ ಸಮುಚಿತ ಪ್ರಾಧಿಕಾರದ ಕೋರಿಕೆಯ ಮೇರೆಗೆ ಸಭೆ ಸೇರಬಹುದು:

ಪರಂತು, ಯಾವುದೇ ಎರಡು ಸಭೆಗಳ ನಡುವಿನ ಮಧ್ಯಂತರ ಅವಧಿಯು ನಿಯಮಿಸಲಾದ ಅವಧಿಯನ್ನು ಮೀರತಕ್ಕದ್ದಲ್ಲ.

(9) ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಒಬ್ಬ ವ್ಯಕ್ತಿಯನ್ನು ಸಲಹಾ ಸಮಿತಿಗೆ ನೇಮಕ ಮಾಡಬಹುದೋ, ಆ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಂತಹ ಸಮಿತಿಯು ಪಾಲಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**17ಎ. ಸಮುಚಿತ ಪ್ರಾಧಿಕಾರಗಳ ಅಧಿಕಾರಗಳು.–** ಸಮುಚಿತ ಪ್ರಾಧಿಕಾರವು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು;

(ಬಿ) (ಎ) ಖಂಡಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜನ್ನು ಅಥವಾ ಮಹತ್ವದ ವಸ್ತುವನ್ನು ಹಾಜರುಪಡಿಸುವುದು;

(ಸಿ) ಲಿಂಗ ಆಯ್ಕೆ ತಂತ್ರ ವಿಧಾನಗಳಲ್ಲಿ ಅಥವಾ ಪ್ರಸವಪೂರ್ವ ಲಿಂಗ ನಿರ್ಧರಣೆಯಲ್ಲಿ ಉಪಯೋಗಿಸಲಾಗುತ್ತಿದೆಯೆಂದು ಸಂಶಯವಿರುವ ಯಾವುದೇ ಸ್ಥಳಕ್ಕೆ ಶೋಧನಾ ವಾರಂಟನ್ನು ಹೊರಡಿಸುವುದು;

(ಡಿ) ನಿಯಮಿಸಬಹುದಾದ ಯಾವುದೇ ಇತರ ವಿಷಯ.

## ಅಧ್ಯಾಯ – VI

## ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ನೋಂದಣಿ

**18. ಆನುವಂಶೀಯತೆ ಸಲಹಾ ಕೇಂದ್ರಗಳ, ಆನುವಂಶೀಯತೆ ಪ್ರಯೋಗಾಲಯಗಳ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳ ನೋಂದಣಿ.**– (1) ಯಾರೇ ವ್ಯಕ್ತಿಯು ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ನಿಯಂತ್ರಣ ಮತ್ತು ದುರುಪಯೋಗ ಪ್ರತಿಬಂಧ) ತಿದ್ದುಪಡಿ ಅಧಿನಿಯಮ, 2002ರ ಪ್ರಾರಂಭದ ನಂತರ, ಭ್ರೂಣದ ಲಿಂಗ ನಿರ್ಧರಣೆಯನ್ನು ಮತ್ತು ಲಿಂಗ ಆಯ್ಕೆಯನ್ನು ಕೈಗೊಳ್ಳುವುದಕ್ಕೆ ಸಮರ್ಥವಿರುವ ಶ್ರವಣಾತೀತ ಧ್ವನಿ ತರಂಗ ಯಂತ್ರವನ್ನು ಅಥವಾ ಬಿಂಬಚಿತ್ರಣ ಯಂತ್ರ ಅಥವಾ ಕ್ಷಿಪ್ರವೀಕ್ಷಣ ಯಂತ್ರವನ್ನು ಅಥವಾ ಯಾವುದೇ ಇತರ ತಂತ್ರಜ್ಞಾನವನ್ನು ಹೊಂದಿರುವ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಸೇವೆ ಸಲ್ಲಿಸುತ್ತಿರುವ ಯಾವುದೇ ಚಿಕಿತ್ಸಾಲಯವನ್ನು, ಪ್ರಯೋಗಾಲಯವನ್ನು ಅಥವಾ ಕೇಂದ್ರವನ್ನು ಒಳಗೊಂಡಂತೆ ಯಾವುದೇ ಆನುವಂಶೀಯತೆ ಸಲಹಾ ಕೇಂದ್ರವನ್ನು ಅಥವಾ ಆನುವಂಶೀಯತೆ ಪ್ರಯೋಗಾಲಯವನ್ನು ಅಥವಾ ಆನುವಂಶೀಯತೆ ಚಿಕಿತ್ಸಾಲಯವನ್ನು ಈ ಅಧಿನಿಯಮದ ಮೇರೆಗೆ ಅಂಥ ಕೇಂದ್ರವನ್ನು, ಪ್ರಯೋಗಾಲಯವನ್ನು ಅಥವಾ ಚಿಕಿತ್ಸಾಲಯವನ್ನು ಕ್ರಮಬದ್ಧವಾಗಿ ನೋಂದಾಯಿಸಿದ್ದ ಹೊರತು ತೆರೆಯತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ನೊಂದಣಿಗಾಗಿ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಶುಲ್ಕದೊಡನೆ ಸಮುಚಿತ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(3) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ 4ನೇ ಪ್ರಕರಣದಲ್ಲಿ ನಮೂದಿಸಲಾದ ಯಾವುವೇ ಉದ್ದೇಶಗಳಿಗಾಗಿ, ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ ಬಗ್ಗೆ ಸಲಹೆ ನೀಡುವಲ್ಲಿ ಅಥವಾ ಅದನ್ನು ಕೈಗೊಳ್ಳುವಲ್ಲಿ ಭಾಗಶಃವಾಗಿಯಾಗಲಿ ಅಥವಾ ಅನನ್ಯವಾಗಿಯಾಗಲಿ ನಿರತವಾಗಿರುವ ಪ್ರತಿಯೊಂದು ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು ನೋಂದಣಿಗಾಗಿ ಹಾಗೆ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) 6ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ ಬಗ್ಗೆ ಸಲಹೆ ನೀಡುವಲ್ಲಿ ಅಥವಾ ಅದನ್ನು ಕೈಗೊಳ್ಳುವುದರಲ್ಲಿ ನಿರತವಾಗಿರುವ ಪ್ರತಿಯೊಂದು ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು, ಅಂಥ ಕೇಂದ್ರವು, ಪ್ರಯೋಗಾಲಯವು ಅಥವಾ ಚಿಕಿತ್ಸಾಲಯವು ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದ ಹೊರತು, ಮತ್ತು ಹಾಗೆ ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ನೋಂದಣಿಯಾಗಿದ್ದ

ಹೊರತು ಅಥವಾ ಅಂಥ ಅರ್ಜಿಯು ವಿಲೇವಾರಿಯಾಗುವವರೆಗೆ – ಇವುಗಳಲ್ಲಿ ಯಾವುದು ಮೊದಲೋ ಆವರೆಗೆ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳ ಮುಕ್ತಾಯದ ತರುವಾಯ ಯಾವುದೇ ಹಾಗೆ ಸಲಹೆ ನೀಡುವುದನ್ನು ಅಥವಾ ತಂತ್ರ ವಿಧಾನವನ್ನು ಕೈಗೊಳ್ಳುವುದನ್ನು ನಿಲ್ಲಿಸತಕ್ಕದ್ದು.

(5) ಯಾವುದೇ ಆನುವಂಶೀಯತೆ ಸಲಹಾ ಕೇಂದ್ರವನ್ನು, ಆನುವಂಶೀಯತೆ ಪ್ರಯೋಗಾಲಯವನ್ನು ಅಥವಾ ಆನುವಂಶೀಯತೆ ಚಿಕಿತ್ಸಾಲಯವನ್ನು, ಅಂಥ ಕೇಂದ್ರವು, ಪ್ರಯೋಗಾಲಯವು ಅಥವಾ ಚಿಕಿತ್ಸಾಲಯವು ನಿಯಮಿಸಬಹುದಾದಂಥ ಸೌಕರ್ಯಗಳನ್ನು ಒದಗಿಸುವ, ಅಂಥ ಸಲಕರಣೆಯನ್ನು ಮತ್ತು ಗುಣಮಟ್ಟಗಳನ್ನು ನಿರ್ವಹಿಸುವ ಸ್ಥಿತಿಯಲ್ಲಿದೆಯೆಂದು ಸಮುಚಿತ ಪ್ರಾಧಿಕಾರಕ್ಕೆ ಮನದಟ್ಟಾದ ಹೊರತು, ಈ ಅಧಿನಿಯಮದ ಮೇರೆಗೆ ನೋಂದಾಯಿಸತಕ್ಕದ್ದಲ್ಲ.

**19. ನೋಂದಣಿ ಪ್ರಮಾಣಪತ್ರ.–** (1) ಸಮುಚಿತ ಪ್ರಾಧಿಕಾರವು, ವಿಚಾರಣೆಯನ್ನು ನಡೆಸಿದ ನಂತರ ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಎಲ್ಲ ನಿಯಮಗಳ ಅಗತ್ಯತೆಗಳನ್ನು ಅರ್ಜಿದಾರನು ಪಾಲಿಸಿದ್ದಾನೆಂದು ಮನಗಂಡ ನಂತರ ಮತ್ತು ಈ ಬಗ್ಗೆ ಸಲಹಾ ಸಮಿತಿಯು ನೀಡಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಸಂದರ್ಭಾನುಸಾರ, ಆನುವಂಶೀಯತೆ ಸಲಹಾ ಕೇಂದ್ರಕ್ಕೆ, ಆನುವಂಶೀಯತೆ ಪ್ರಯೋಗಾಲಯಕ್ಕೆ ಅಥವಾ ಆನುವಂಶೀಯತೆ ಚಿಕಿತ್ಸಾಲಯಕ್ಕೆ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ನಿಯಮಿಸಲಾದ ನಮೂನೆಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡತಕ್ಕದ್ದು.

(2) ವಿಚಾರಣೆಯ ನಂತರ ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ ಮತ್ತು ಸಲಹಾ ಸಮಿತಿಯು ನೀಡಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಅರ್ಜಿದಾರನು ಈ ಅಧಿನಿಯಮದ ಅಥವಾ ನಿಯಮಗಳ ಅಗತ್ಯತೆಗಳನ್ನು ಪಾಲಿಸಿಲ್ಲವೆಂದು ಸಮುಚಿತ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನೋಂದಣಿಗೆ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(3) ಪ್ರತಿಯೊಂದು ನೋಂದಣಿ ಪ್ರಮಾಣ ಪತ್ರವನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂಥ ಅವಧಿಯ ನಂತರ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿದ ನಂತರ ನವೀಕರಿಸತಕ್ಕದ್ದು.

(4) ನೋಂದಣಿ ಪ್ರಮಾಣ ಪತ್ರವನ್ನು, ನೋಂದಾಯಿತ ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು ತನ್ನ ವ್ಯವಹಾರದ ಸ್ಥಳದಲ್ಲಿನ ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**20. ನೋಂದಣಿಯ ರದ್ದಿಯಾತಿ ಅಥವಾ ಅಮಾನತು.**– (1) ಸಮುಚಿತ ಪ್ರಾಧಿಕಾರವು, ತಾನಾಗಿಯೇ ಅಥವಾ ಫಿರ್ಯಾದಿನ ಮೇರೆಗೆ, ನೋಟೀಸಿನಲ್ಲಿ ನಮೂದಿಸಿದ ಕಾರಣಗಳಿಗಾಗಿ, ನೋಂದಣಿಯನ್ನು ಏಕೆ ಅಮಾನತುಗೊಳಿಸಬಾರದು ಅಥವಾ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವಂತೆ ಕೇಳಿ, ಆನುವಂಶೀಯತೆ ಸಲಹಾ ಕೇಂದ್ರಕ್ಕೆ, ಆನುವಂಶೀಯತೆ ಪ್ರಯೋಗಾಲಯಕ್ಕೆ ಅಥವಾ ಆನುವಂಶೀಯತೆ ಚಿಕಿತ್ಸಾಲಯಕ್ಕೆ ನೋಟೀಸನ್ನು ನೀಡಬಹುದು.

(2) ಆನುವಂಶೀಯತೆ ಸಲಹಾ ಕೇಂದ್ರಕ್ಕೆ, ಆನುವಂಶೀಯತೆ ಪ್ರಯೋಗಾಲಯಕ್ಕೆ ಅಥವಾ ಆನುವಂಶೀಯತೆ ಚಿಕಿತ್ಸಾಲಯಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ನಂತರ ಮತ್ತು ಸಲಹಾ ಸಮಿತಿಯ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಸಮುಚಿತ ಪ್ರಾಧಿಕಾರಕ್ಕೆ, ಈ ಅಧಿನಿಯಮದ ಅಥವಾ ನಿಯಮಗಳ ಉಪಬಂಧಗಳ ಉಲ್ಲಂಘನೆ ಯಾಗಿದೆಯೆಂದು ಮನದಟ್ಟಾದರೆ, ಅಂತಹ ಕೇಂದ್ರದ, ಪ್ರಯೋಗಾಲಯದ ಅಥವಾ ಚಿಕಿತ್ಸಾಲಯದ ವಿರುದ್ಧ ಅದು ತೆಗೆದುಕೊಳ್ಳಬಹುದಾದ ಯಾವುದೇ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ, ಸಂದರ್ಭಾನುಸಾರ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗೆ ಅದರ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ಅದರ ನೋಂದಣಿಯನ್ನು ರದ್ದುಗೊಳಿಸಬಹುದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಆನುವಂಶೀಯತೆ ಸಲಹಾ ಕೇಂದ್ರದ, ಆನುವಂಶೀಯತೆ ಪ್ರಯೋಗಾಲಯದ ಅಥವಾ ಆನುವಂಶೀಯತೆ ಚಿಕಿತ್ಸಾಲಯದ ನೋಂದಣಿಯನ್ನು ಅಮಾನತುಗೊಳಿಸುವುದು ಅವಶ್ಯವೆಂದು ಅಥವಾ ವಿಹಿತವೆಂದು ಸಮುಚಿತ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಅಂಥ ನೋಟೀಸನ್ನು ನೀಡದೆ ಹಾಗೆ ಅಮಾನತುಗೊಳಿಸಬಹುದು.

**21. ಅಪೀಲು.**– ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು, 20ನೇ ಪ್ರಕರಣದ ಮೇರೆಗೆ ಸಮುಚಿತ ಪ್ರಾಧಿಕಾರವು ಹೊರಡಿಸಿದ ನೋಂದಣಿಯ ಅಮಾನತ್ತಿನ ಅಥವಾ ರದ್ದಿಯಾತಿಯ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಅಂತಹ ಆದೇಶದ ವಿರುದ್ಧ,–

(i) ಕೇಂದ್ರ ಸಮುಚಿತ ಪ್ರಾಧಿಕಾರದ ಆದೇಶದ ವಿರುದ್ಧದ ಅಪೀಲನ್ನು, ಕೇಂದ್ರ ಸರ್ಕಾರಕ್ಕೆ; ಮತ್ತು

(ii) ರಾಜ್ಯ ಸಮುಚಿತ ಪ್ರಾಧಿಕಾರದ ಆದೇಶದ ವಿರುದ್ಧ ಅಪೀಲನ್ನು, ರಾಜ್ಯ ಸರ್ಕಾರಕ್ಕೆ

– ನಿಯಮಿಸಿದ ರೀತಿಯಲ್ಲಿ ಸಲ್ಲಿಸತಕ್ಕದ್ದು.

## ಅಧ್ಯಾಯ – VII
## ಅಪರಾಧಗಳು ಮತ್ತು ದಂಡನೆಗಳು

**22. ಪ್ರಸವ ಪೂರ್ವ ಲಿಂಗ ನಿರ್ಧರಣೆಗೆ ಸಂಬಂಧಿಸಿದ ಜಾಹೀರಾತಿನ ನಿಷೇಧ ಮತ್ತು ಅದರ ಉಲ್ಲಂಘನೆಗಾಗಿ ದಂಡನೆ.–** (1) ಭ್ರೂಣದ ಲಿಂಗ ನಿರ್ಧರಣೆಯನ್ನು ಅಥವಾ ಲಿಂಗ ಆಯ್ಕೆಯನ್ನು ಕೈಗೊಳ್ಳಲು ಸಮರ್ಥವಿರುವ ಶ್ರವಣಾತೀತ ಧ್ವನಿತರಂಗ ಯಂತ್ರ ಅಥವಾ ಬಿಂಬಚಿತ್ರಣ ಯಂತ್ರವನ್ನು ಅಥವಾ ಕ್ಷಿಪ್ರ ವೀಕ್ಷಣ ಯಂತ್ರವನ್ನು ಅಥವಾ ಯಾವುದೇ ಇತರ ತಂತ್ರಜ್ಞಾನವನ್ನು ಹೊಂದಿರುವ ಚಿಕಿತ್ಸಾಲಯವನ್ನು, ಪ್ರಯೋಗಾಲಯವನ್ನು ಅಥವಾ ಕೇಂದ್ರವನ್ನು ಒಳಗೊಂಡಂತೆ ಯಾರೇ ವ್ಯಕ್ತಿಯು, ಸಂಸ್ಥೆಯು, ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು, ಅಂಥ ಕೇಂದ್ರದಲ್ಲಿ, ಪ್ರಯೋಗಾಲಯದಲ್ಲಿ, ಚಿಕಿತ್ಸಾಲಯದಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ಪ್ರಸವಪೂರ್ವ ಲಿಂಗ ನಿರ್ಧರಣೆಗೆ ಅಥವಾ ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಗೆ ಲಭ್ಯವಿರುವ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅಂತರ್ಜಾಲವೂ ಸೇರಿದಂತೆ ಯಾವುದೇ ರೂಪದಲ್ಲಿ ಯಾವುದೇ ಜಾಹೀರಾತನ್ನು ನೀಡತಕ್ಕದ್ದಲ್ಲ, ಪ್ರಕಟಿಸತಕ್ಕದ್ದಲ್ಲ, ವಿತರಿಸತಕ್ಕದ್ದಲ್ಲ, ತಿಳಿಸತಕ್ಕದ್ದಲ್ಲ ಅಥವಾ ನೀಡುವಂತೆ, ಪ್ರಕಟಿಸುವಂತೆ, ವಿತರಿಸುವಂತೆ ಅಥವಾ ತಿಳಿಸುವಂತೆ ಮಾಡತಕ್ಕದ್ದಲ್ಲ.

(2) ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವೂ ಸೇರಿದಂತೆ ಯಾರೇ ವ್ಯಕ್ತಿಯು ಅಥವಾ ಸಂಘಸಂಸ್ಥೆಯು ವೈಜ್ಞಾನಿಕವಾಗಿ ಅಥವಾ ಬೇರೆ ರೀತಿಯಲ್ಲಿ ಯಾವುದೇ ವಿಧಾನದ ಮೂಲಕ ಪ್ರಸವಪೂರ್ವ ಲಿಂಗ ನಿರ್ಧರಣೆಗೆ ಅಥವಾ ಗರ್ಭಧಾರಣೆಗೆ ಮುಂಚೆ ಲಿಂಗ ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ, ಯಾವುದೇ ಜಾಹೀರಾತನ್ನು ನೀಡತಕ್ಕದ್ದಲ್ಲ, ಪ್ರಕಟಿಸತಕ್ಕದ್ದಲ್ಲ, ವಿತರಿಸತಕ್ಕದ್ದಲ್ಲ, ತಿಳಿಸತಕ್ಕದ್ದಲ್ಲ ಅಥವಾ ನೀಡುವಂತೆ, ಪ್ರಕಟಿಸುವಂತೆ, ವಿತರಿಸುವಂತೆ ಅಥವಾ ತಿಳಿಸುವಂತೆ ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತುಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, "ಜಾಹೀರಾತು" ಎಂಬುದು ವಿದ್ಯುನ್ಮಾನ ಅಥವಾ ಮುದ್ರಣ ರೂಪದಲ್ಲಿರುವ ಅಂತರ್ಜಾಲದ ಅಥವಾ ಯಾವುದೇ ಇತರ ಮಾಧ್ಯಮದ ಮೂಲಕ ನೀಡುವ ಜಾಹೀರಾತೂ ಸೇರಿದಂತೆ ಯಾವುದೇ ನೋಟೀಸನ್ನು, ಸುತ್ತೋಲೆಯನ್ನು, ಲೇಬಲನ್ನು, ರಟ್ಟನ್ನು ಅಥವಾ ಯಾವುದೇ ಇತರ ದಸ್ತಾವೇಜನ್ನು ಒಳಗೊಳ್ಳುತ್ತದೆ ಮತ್ತು ಯಾವುದೇ ಜಾಹೀರಾತು ಫಲಕದ, ಭಿತ್ತಿ

ಚಿತ್ರದ, ಚಿಹ್ನೆಯ, ಬೆಳಕಿನ, ಶಬ್ದದ, ಹೊಗೆಯ ಅಥವಾ ಅನಿಲ ಮಾಧ್ಯಮದ ಮೂಲಕ ಮಾಡಲಾದ ಯಾವುದೇ ದೃಶ್ಯ ನಿರೂಪಣೆಯನ್ನು ಸಹ ಒಳಗೊಳ್ಳುತ್ತದೆ.

**23. ಅಪರಾಧಗಳು ಮತ್ತು ದಂಡನೆಗಳು.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಯಾರೇ ಆನುವಂಶೀಯ ವೈದ್ಯ ತಜ್ಞನು, ಸ್ತ್ರೀರೋಗತಜ್ಞನು, ನೋಂದಾಯಿತ ವೈದ್ಯ ವೃತ್ತಿಗನು ಅಥವಾ ಆನುವಂಶೀಯತೆ ಸಲಹಾ ಕೇಂದ್ರದ, ಆನುವಂಶೀಯತೆ ಪ್ರಯೋಗಾಲಯದ ಅಥವಾ ಆನುವಂಶೀಯತೆ ಚಿಕಿತ್ಸಾಲಯದ ಒಡೆತನ ಹೊಂದಿರುವ ಅಥವಾ ಅಂತಹ ಕೇಂದ್ರದಲ್ಲಿ, ಪ್ರಯೋಗಾಲಯದಲ್ಲಿ ಅಥವಾ ಚಿಕಿತ್ಸಾಲಯದಲ್ಲಿ ನಿಯೋಜಿತನಾಗಿರುವ ಮತ್ತು ಗೌರವದ ಆಧಾರದ ಮೇಲಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ ಅಂತಹ ಕೇಂದ್ರಕ್ಕೆ, ಪ್ರಯೋಗಾಲಯಕ್ಕೆ ಅಥವಾ ಚಿಕಿತ್ಸಾಲಯಕ್ಕೆ ಅಥವಾ ಅವುಗಳಲ್ಲಿ ತನ್ನ ವೃತ್ತೀಯ ಅಥವಾ ತಾಂತ್ರಿಕ ಸೇವೆಗಳನ್ನು ಸಲ್ಲಿಸುತ್ತಿರುವ ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ನ್ಯಾಯಾಲಯವು ಆರೋಪವನ್ನು ಹೊರಿಸಿದರೆ, ಪ್ರಕರಣವನ್ನು ಇತ್ಯರ್ಥ ಗೊಳಿಸುವವರೆಗೆ ನೋಂದಣಿಯನ್ನು ಅಮಾನತುಗೊಳಿಸುವುದೂ ಸೇರಿದಂತೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ಅಪರಾಧ ನಿರ್ಣಯವಾದಲ್ಲಿ ಮೊದಲ ಅಪರಾಧಕ್ಕಾಗಿ ಐದು ವರ್ಷಗಳ ಅವಧಿಗೆ ಮತ್ತು ತರುವಾಯದ ಅಪರಾಧಕ್ಕಾಗಿ ಶಾಶ್ವತವಾಗಿ ಪರಿಷತ್ತಿನ ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕುವುದಕ್ಕಾಗಿ ಸಮುಚಿತ ಪ್ರಾಧಿಕಾರವು, ನೋಂದಾಯಿತ ವೈದ್ಯನ ಹೆಸರನ್ನು, ರಾಜ್ಯ ವೈದ್ಯಕೀಯ ಪರಿಷತ್ತಿಗೆ ವರದಿ ಮಾಡತಕ್ಕದ್ದು.

(3) 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳನ್ನು ಹೊರತುಪಡಿಸಿ ಇತರ ಉದ್ದೇಶಗಳಿಗಾಗಿ ಯಾರೇ ಗರ್ಭಿಣಿ ಮಹಿಳೆಯರ ಮೇಲೆ ಲಿಂಗ ಆಯ್ಕೆಯ ಅಥವಾ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಉಪಯೋಗಿಸುವುದಕ್ಕಾಗಿ ಆನುವಂಶೀಯತೆ ಸಲಹಾ ಕೇಂದ್ರದ, ಆನುವಂಶೀಯತೆ ಪ್ರಯೋಗಾಲಯದ ಅಥವಾ ಆನುವಂಶೀಯತೆ ಚಿಕಿತ್ಸಾಲಯದ ಅಥವಾ ಶ್ರವಣಾತೀತ ಧ್ವನಿತರಂಗ ಚಿಕಿತ್ಸಾಲಯದ ಅಥವಾ ಬಿಂಬಚಿತ್ರಣ ಚಿಕಿತ್ಸಾಲಯದ ಅಥವಾ ಆನುವಂಶೀಯ ವೈದ್ಯ ತಜ್ಞನ, ಸ್ತ್ರೀರೋಗ ತಜ್ಞನ, ಶ್ರವಣಾತೀತ ಧ್ವನಿತರಂಗ ಚಿತ್ರಣ ತಜ್ಞನ ಅಥವಾ ಬಿಂಬಚಿತ್ರಣ ತಜ್ಞನ ಅಥವಾ ನೋಂದಾಯಿತ ವೈದ್ಯ ವೃತ್ತಿಗನ ಅಥವಾ ಯಾರೇ ಇತರ ವ್ಯಕ್ತಿಯ ನೆರವನ್ನು ಕೋರುವ ಯಾರೇ ವ್ಯಕ್ತಿಯು ಮೊದಲ ಅಪರಾಧಕ್ಕಾಗಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ

ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಸಂದೇಹಗಳ ನಿವಾರಣೆಗಾಗಿ, (3)ನೇ ಉಪಪ್ರಕರಣದ ಉಪಬಂಧಗಳು ಅಂಥ ಪತ್ತೆ ತಂತ್ರ ವಿಧಾನಗಳಿಗೆ ಅಥವಾ ಅಂಥ ಆಯ್ಕೆಗೆ ಒಳಗಾಗುವಂತೆ ಒತ್ತಾಯಕ್ಕೊಳಪಟ್ಟ ಮಹಿಳೆಗೆ ಅನ್ವಯವಾಗತಕ್ಕದ್ದಲ್ಲ ಎಂದು ಈ ಮೂಲಕ ಉಪಬಂಧಿಸಲಾಗಿದೆ.

**24. ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪೂರ್ವಭಾವನೆ.–** ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಏನೇ ಒಳಗೊಂಡಿದ್ದರೂ, ಗರ್ಭಿಣಿ ಮಹಿಳೆಯನ್ನು 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶವನ್ನು ಹೊರತುಪಡಿಸಿ ಇತರ ಉದ್ದೇಶಗಳಿಗಾಗಿ ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳಿಗೆ ಒಳಗಾಗಲು, ಸಂದರ್ಭಾನುಸಾರ, ಆಕೆಯ ಪತಿಯು ಅಥವಾ ಯಾರೇ ಇತರ ಸಂಬಂಧಿಯು ಒತ್ತಾಯಿಸಿದ್ದಾರೆ ಎಂಬುದಕ್ಕೆ ವಿರುದ್ಧವಾದುದು ರುಜುವಾತಾದ ಹೊರತು, ಹಾಗೆ ಮಾಡಿದ್ದಾರೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯು 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪರಾಧದ ದುಷ್ಪ್ರೇರಣೆಗಾಗಿ ಹೊಣೆಗಾರನಾಗತಕ್ಕದ್ದು ಮತ್ತು ಆ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅಪರಾಧಕ್ಕಾಗಿ ದಂಡಿತನಾಗತಕ್ಕದ್ದು.

**25. ಈ ಅಧಿನಿಯಮದ ಅಥವಾ ನಿಯಮಗಳ ಯಾವ ಉಪಬಂಧಗಳ ಉಲ್ಲಂಘನೆಗಾಗಿ ನಿರ್ದಿಷ್ಟ ದಂಡನೆಯನ್ನು ಉಪಬಂಧಿಸಿಲ್ಲವೋ ಅವುಗಳ ಉಲ್ಲಂಘನೆಗಾಗಿ ದಂಡನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ ಮತ್ತು ಅದಕ್ಕೆ ಈ ಅಧಿನಿಯಮದ ಯಾವುದೇ ಭಾಗದಲ್ಲಾದರೂ ಯಾವುದೇ ದಂಡನೆಯನ್ನು ಉಪಬಂಧಿಸಿಲ್ಲದಿದ್ದರೆ, ಆ ಉಲ್ಲಂಘನೆಗಾಗಿ ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಪರಾಧ ನಿರ್ಣಯವಾದ ನಂತರವೂ ಅಂಥ ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿ ಅಂಥ ಮೊದಲ ಉಲ್ಲಂಘನೆಗಾಗಿ ಪ್ರತೀ ದಿವಸಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**26. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರದ ನಿರ್ವಹಣೆಗಾಗಿ ಕಂಪೆನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥರೆಂದು

ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆಯೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತು ಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಕಂಪೆನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆದಿದೆಯೆಂದು ರುಜುವಾತಾಗಿರುವಲ್ಲಿ ಅಥವಾ ಹಾಗೆ ನಡೆದಿದೆಯೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪೆನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮನ್ನು ಹಾಗೂ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ, "ನಿರ್ದೇಶಕ" ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

**27. ಅಪರಾಧವು ಸಂಜ್ಞೇಯವಾದುದು, ಜಾಮೀನೀಯವಲ್ಲದ್ದು ಮತ್ತು ರಾಜಿ ಮಾಡಿಕೊಳ್ಳಲಾಗದ್ದು ಆಗಿರತಕ್ಕದ್ದು.–** ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವು ಸಂಜ್ಞೇಯವಾದುದು, ಜಾಮೀನೀಯವಲ್ಲದ್ದು ಮತ್ತು ರಾಜಿ ಮಾಡಿಕೊಳ್ಳಲಾಗದ್ದು ಆಗಿರತಕ್ಕದ್ದು.

**28. ಅಪರಾಧಗಳ ಸಂಜ್ಞೇಯತೆ.–** (1) ಯಾವುದೇ ನ್ಯಾಯಾಲಯವು,–

(ಎ) ಸಂಬಂಧಪಟ್ಟ ಸಮುಚಿತ ಪ್ರಾಧಿಕಾರವು, ಅಥವಾ ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಸಮುಚಿತ ಪ್ರಾಧಿಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು; ಅಥವಾ

(ಬಿ) ಆಪಾದಿಸಲಾದ ಅಪರಾಧದ ಬಗ್ಗೆ ಮತ್ತು ನ್ಯಾಯಾಲಯಕ್ಕೆ ಫಿರ್ಯಾದು ನೀಡುವ ತನ್ನ ಉದ್ದೇಶದ ಬಗ್ಗೆ, ನಿಯಮಿಸಿದ ರೀತಿಯಲ್ಲಿ ಹದಿನೈದು ದಿನಗಳಿಗಿಂತ ಕಡಿಮೆಯಿಲ್ಲದಂತೆ ಸಮುಚಿತ ಪ್ರಾಧಿಕಾರಕ್ಕೆ ನೋಟೀಸನ್ನು ನೀಡಿದ ಯಾರೇ ವ್ಯಕ್ತಿಯು

– ನೀಡಿದ ಫಿರ್ಯಾದಿನ ಹೊರತು, ಈ ಅಧಿನಿಯಮದ ಮೇರೆಗಿನ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**ವಿವರಣೆ:**– ಈ ಖಂಡದ ಉದ್ದೇಶಕ್ಕಾಗಿ, "ವ್ಯಕ್ತಿ" ಎಂಬುದು ಸಾಮಾಜಿಕ ಸಂಘ ಸಂಸ್ಥೆಯನ್ನು ಒಳಗೊಳ್ಳುತ್ತದೆ.

(2) ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯವನ್ನು ಹೊರತುಪಡಿಸಿ ಇತರ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

(3) ಫಿರ್ಯಾದನ್ನು (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಸಲ್ಲಿಸಿರುವಲ್ಲಿ, ನ್ಯಾಯಾಲಯವು, ಅಂಥ ವ್ಯಕ್ತಿಯ ಕೋರಿಕೆಯ ಮೇರೆಗೆ, ಅಂಥ ವ್ಯಕ್ತಿಗೆ ತನ್ನ ಸ್ವಾಧೀನದಲ್ಲಿರುವ ಲಭ್ಯವಿರುವ ಸುಸಂಬದ್ಧ ದಾಖಲೆಗಳ ಪ್ರತಿಗಳನ್ನು ಒದಗಿಸುವುದಕ್ಕೆ ಸಮುಚಿತ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು.

## ಅಧ್ಯಾಯ – VIII
## ಸಂಕೀರ್ಣ

**29. ದಾಖಲೆಗಳ ನಿರ್ವಹಣೆ.**– (1) ಈ ಅಧಿನಿಯಮದ ಮತ್ತು ನಿಯಮಗಳ ಮೇರೆಗೆ ನಿರ್ವಹಿಸುವಂತೆ ಅಗತ್ಯಪಡಿಸಿದ ಎಲ್ಲ ದಾಖಲೆಗಳನ್ನು, ಚಾರ್ಟುಗಳನ್ನು, ನಮೂನೆಗಳನ್ನು, ವರದಿಗಳನ್ನು, ಸಮ್ಮತಿ ಪತ್ರಗಳನ್ನು ಮತ್ತು ಎಲ್ಲ ಇತರ ದಸ್ತಾವೇಜುಗಳನ್ನು ಎರಡು ವರ್ಷಗಳ ಅವಧಿಯವರೆಗೆ ಅಥವಾ ನಿಯಮಿಸಬಹುದಾದಂಥ ಅವಧಿಯವರೆಗೆ ಸಂರಕ್ಷಿಸತಕ್ಕದ್ದು:

ಪರಂತು, ಯಾವುದೇ ಆನುವಂಶೀಯತೆ ಸಲಹಾ ಕೇಂದ್ರದ, ಆನುವಂಶೀಯತೆ ಪ್ರಯೋಗಾಲಯದ ಅಥವಾ ಆನುವಂಶೀಯತೆ ಚಿಕಿತ್ಸಾಲಯದ ವಿರುದ್ಧ ಯಾವುದೇ ಕ್ರಿಮಿನಲ್ ಅಥವಾ ಇತರ ವ್ಯವಹರಣೆಗಳನ್ನು ಹೂಡಿದರೆ, ಅಂಥ ಕೇಂದ್ರದ, ಪ್ರಯೋಗಾಲಯದ ಅಥವಾ ಚಿಕಿತ್ಸಾಲಯದ ದಾಖಲೆಗಳನ್ನು ಮತ್ತು ಎಲ್ಲ ಇತರ ದಸ್ತಾವೇಜುಗಳನ್ನು ಅಂಥ ವ್ಯವಹರಣೆಗಳು ಅಂತಿಮವಾಗಿ ವಿಲೆಯಾಗುವರೆಗೆ ಸಂರಕ್ಷಿಸತಕ್ಕದ್ದು.

(2) ಅಂಥ ಎಲ್ಲ ದಾಖಲೆಗಳು, ಎಲ್ಲ ಸೂಕ್ತ ಕಾಲಗಳಲ್ಲಿ, ಸಮುಚಿತ ಪ್ರಾಧಿಕಾರಕ್ಕೆ ಅಥವಾ ಈ ಬಗ್ಗೆ ಸಮುಚಿತ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಗೆ ಪರಿಶೀಲನೆಗಾಗಿ ಲಭ್ಯವಿರತಕ್ಕದ್ದು.

**30. ದಾಖಲೆಗಳನ್ನು ಶೋಧಿಸಲು ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರ.–** (1) ಯಾವುದೇ ಆನುವಂಶೀಯತೆ ಸಲಹಾ ಕೇಂದ್ರದಲ್ಲಿ, ಆನುವಂಶೀಯತೆ ಪ್ರಯೋಗಾಲಯದಲ್ಲಿ ಅಥವಾ ಆನುವಂಶೀಯತೆ ಚಿಕಿತ್ಸಾಲಯದಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆಯೆಂದು ಸಮುಚಿತ ಪ್ರಾಧಿಕಾರಕ್ಕೆ ನಂಬಲು ಕಾರಣವಿದ್ದರೆ, ಅಂಥ ಪ್ರಾಧಿಕಾರವು ಅಥವಾ ಈ ಬಗ್ಗೆ ಅದು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಅಂಥ ಪ್ರಾಧಿಕಾರವು ಅಥವಾ ಅಧಿಕಾರಿಯು ಅವಶ್ಯವೆಂದು ಪರಿಗಣಿಸಬಹುದಾದಂಥ ನೆರವು, ಯಾವುದಾದರೂ ಇದ್ದರೆ, ಅದರೊಂದಿಗೆ ಎಲ್ಲ ಸೂಕ್ತ ಕಾಲಗಳಲ್ಲಿ, ಅಂಥ ಆನುವಂಶೀಯತೆ ಸಲಹಾ ಕೇಂದ್ರವನ್ನು, ಆನುವಂಶೀಯತೆ ಪ್ರಯೋಗಾಲಯವನ್ನು ಅಥವಾ ಆನುವಂಶೀಯತೆ ಚಿಕಿತ್ಸಾಲಯವನ್ನು ಅಥವಾ ಯಾವುದೇ ಇತರ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು ಮತ್ತು ಅದರಲ್ಲಿ ಕಂಡುಬರುವ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು, ದಸ್ತಾವೇಜನ್ನು, ಪುಸ್ತಕವನ್ನು, ಕರಪತ್ರವನ್ನು, ಜಾಹೀರಾತನ್ನು ಅಥವಾ ಯಾವುದೇ ಇತರ ಮಹತ್ವದ ವಸ್ತುವನ್ನು ಪರೀಕ್ಷಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದುದಕ್ಕೆ ಅದು ಸಾಕ್ಷ್ಯವನ್ನು ಒದಗಿಸಬಹುದೆಂದು ಅಂಥ ಪ್ರಾಧಿಕಾರವು ಅಥವಾ ಅಧಿಕಾರಿಯು ನಂಬಲು ಕಾರಣವಿದ್ದರೆ ಅದನ್ನು ವಶಪಡಿಸಿಕೊಳ್ಳಬಹುದು ಮತ್ತು ಅದಕ್ಕೆ ಮೊಹರು ಮಾಡಬಹುದು.

(2) ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವಿಕೆಗಳಿಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಈ ಅಧಿನಿಯಮದ ಮೇರೆಗೆ ಮಾಡಿದ ಪ್ರತಿಯೊಂದು ಶೋಧನೆಗೆ ಅಥವಾ ವಶಪಡಿಸಿಕೊಳ್ಳುವಿಕೆಗೆ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

**31. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯುಮದ ಉಪಬಂಧಗಳಿಗನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಕೇಂದ್ರದ ಅಥವಾ ರಾಜ್ಯ ಸರ್ಕಾರದ ಅಥವಾ ಸಮುಚಿತ ಪ್ರಾಧಿಕಾರದ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರವು ಅಥವಾ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**31ಎ. ತೊಂದರೆಗಳ ನಿವಾರಣೆ.–** (1) ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ನಿಯಂತ್ರಣ ಮತ್ತು ದುರುಪಯೋಗ ಪ್ರತಿಬಂಧ) ತಿದ್ದುಪಡಿ ಅಧಿನಿಯಮ, 2002ರ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು

ಕಂಡುಬರುವ, ಸದರಿ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ, ಉಪಬಂಧಗಳನ್ನು ಮಾಡಬಹುದು:

ಪರಂತು, ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ನಿಯಂತ್ರಣ ಮತ್ತು ದುರುಪಯೋಗ ಪ್ರತಿಬಂಧ) ತಿದ್ದುಪಡಿ ಅಧಿನಿಯಮ, 2002ರ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**32. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,–

(i) 3ನೇ ಪ್ರಕರಣದ (2)ನೇ ಖಂಡದ ಮೇರೆಗೆ ನೋಂದಾಯಿತ ಆನುವಂಶೀಯತೆ ಸಲಹಾ ಕೇಂದ್ರದಲ್ಲಿ, ಆನುವಂಶೀಯತೆ ಪ್ರಯೋಗಾಲಯದಲ್ಲಿ ಅಥವಾ ಆನುವಂಶೀಯತೆ ಚಿಕಿತ್ಸಾಲಯದಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆಗಳು;

(iಎ) ಗರ್ಭಿಣಿ ಮಹಿಳೆಯ ಮೇಲೆ ಶ್ರವಣಾತೀತ ಧ್ವನಿ ತರಂಗ ಚಿತ್ರಣವನ್ನು ಕೈಗೊಳ್ಳುವ ವ್ಯಕ್ತಿಯು 4ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದ ಮೇರೆಗೆ ಚಿಕಿತ್ಸಾಲಯದಲ್ಲಿ ಅದರ ದಾಖಲೆಯನ್ನು ಇಡತಕ್ಕ ರೀತಿ;

(ii) 5ನೇ ಪ್ರಕರಣದ ಮೇರೆಗೆ ಗರ್ಭಿಣಿ ಮಹಿಳೆಯ ಸಮ್ಮತಿಯನ್ನು ಪಡೆಯಬೇಕಾದ ನಮೂನೆ;

(iii) 8ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಕೇಂದ್ರ ಮೇಲ್ವಿಚಾರಣಾ ಮಂಡಲಿಯ ಸದಸ್ಯರು ಅನುಸರಿಸಬೇಕಾದ ಕಾರ್ಯವಿಧಾನ;

(iv) 9ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರಿಗೆ ಅನುಮತಿಸಬಹುದಾದ ಭತ್ಯೆಗಳು;

(ivಎ) 16ನೇ ಪ್ರಕರಣದ (iv)ನೇ ಖಂಡದ ಮೇರೆಗೆ ಕೇಂದ್ರ ಮೇಲ್ವಿಚಾರಣಾ ಮಂಡಲಿಯು ರೂಪಿಸಬೇಕಾದ ಆನುವಂಶೀಯತೆ ಸಲಹಾ ಕೇಂದ್ರಗಳಲ್ಲಿ, ಆನುವಂಶೀಯತೆ

ಪ್ರಯೋಗಾಲಯಗಳಲ್ಲಿ ಮತ್ತು ಆನುವಂಶೀಯತೆ ಚಿಕಿತ್ಸಾಲಯಗಳಲ್ಲಿ ಕೆಲಸಮಾಡುವ ವ್ಯಕ್ತಿಗಳು ಅನುಸರಿಸಬೇಕಾದ ನೀತಿಸಂಹಿತೆ;

(ivಬಿ) ಅಧಿನಿಯಮದ 16ಎ ಪ್ರಕರಣದ (i)ನೇ ಉಪಪ್ರಕರಣದ (iv)ನೇ ಖಂಡದ ಮೇರೆಗೆ ರಾಜ್ಯವು ಕೈಗೊಂಡ ವಿವಿಧ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಒಕ್ಕೂಟ ರಾಜ್ಯಕ್ಷೇತ್ರ ಮೇಲ್ವಿಚಾರಣಾ ಮಂಡಲಿಗಳು ಮಂಡಲಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ವರದಿಗಳನ್ನು ಒದಗಿಸತಕ್ಕ ರೀತಿ;

(ivಸಿ) 17ಎ ಪ್ರಕರಣದ (ಡಿ) ಖಂಡದ ಮೇರೆಗೆ ಯಾವುದೇ ಇತರ ವಿಷಯದಲ್ಲಿ ಸಮುಚಿತ ಪ್ರಾಧಿಕಾರಕ್ಕೆ ಅಧಿಕಾರ ನೀಡುವುದು;

(v) 17ನೇ ಪ್ರಕರಣದ (8)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸಲಹಾ ಸಮಿತಿಯ ಯಾವುದೇ ಎರಡು ಸಭೆಗಳ ನಡುವೆ ಇರಬೇಕಾದ ಮಧ್ಯಂತರ ಅವಧಿ;

(vi) ಸಲಹಾ ಸಮಿತಿಗೆ ವ್ಯಕ್ತಿಯನ್ನು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು; ಮತ್ತು 17ನೇ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ, ಅಂಥ ಸಮಿತಿಯು ಅನುಸರಿಸಬೇಕಾದ ಪ್ರಕ್ರಿಯೆ;

(vii) ನೋಂದಣಿಗಾಗಿ ಸಲ್ಲಿಸತಕ್ಕ ಅರ್ಜಿಯ ನಮೂನೆ ಮತ್ತು ರೀತಿ ಮತ್ತು 18ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆ ಬಗ್ಗೆ ಸಂದಾಯ ಮಾಡಬೇಕಾದ ಶುಲ್ಕ;

(viii) 18ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಆನುವಂಶೀಯತೆ ಸಲಹಾ ಕೇಂದ್ರವು, ಆನುವಂಶೀಯತೆ ಪ್ರಯೋಗಾಲಯವು ಅಥವಾ ಆನುವಂಶೀಯತೆ ಚಿಕಿತ್ಸಾಲಯವು ಒದಗಿಸಬೇಕಾದ ಸೌಕರ್ಯಗಳು ಮತ್ತು ಇಟ್ಟುಕೊಂಡು ಬರಬೇಕಾದ ಸಲಕರಣೆ ಮತ್ತು ಇತರ ಗುಣಮಟ್ಟಗಳು;

(ix) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೀಡತಕ್ಕ ನೋಂದಣಿ ಪ್ರಮಾಣ ಪತ್ರದ ನಮೂನೆ;

(x) 19ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯ ತರುವಾಯ ನವೀಕರಿಸಬೇಕೋ ಆ ರೀತಿ ಮತ್ತು ಅವಧಿ ಮತ್ತು ಅಂಥ ನವೀಕರಣಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕ;

(xi) 21ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಬಹುದಾದ ವಿಧಾನ;

(xii) 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಾಖಲೆಗಳನ್ನು, ಚಾರ್ಟುಗಳನ್ನು, ಇತ್ಯಾದಿಗಳನ್ನು ಯಾವ ಅವಧಿಯವರೆಗೆ ಸಂರಕ್ಷಿಸಬೇಕೋ ಆ ಅವಧಿ;

(xiii) 30ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಸ್ತಾವೇಜುಗಳನ್ನು, ದಾಖಲೆಗಳನ್ನು, ವಸ್ತುಗಳನ್ನು, ಇತ್ಯಾದಿಗಳನ್ನು ವಶಪಡಿಸಿಕೊಳ್ಳುವ ರೀತಿ ಮತ್ತು ಯಾರ ಅಭಿರಕ್ಷೆಯಿಂದ ಅಂಥ ದಸ್ತಾವೇಜುಗಳನ್ನು, ದಾಖಲೆಗಳನ್ನು ಅಥವಾ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ವಶಪಡಿಸಿಕೊಂಡುದರ ಪಟ್ಟಿಯನ್ನು ಯಾವ ರೀತಿಯಲ್ಲಿ ತಯಾರಿಸತಕ್ಕದ್ದೋ ಮತ್ತು ಒಪ್ಪಿಸತಕ್ಕದ್ದೋ ಆ ರೀತಿ;

(xiv) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ

– ಇವುಗಳಿಗಾಗಿ ಉಪಬಂಧ ಕಲ್ಪಿಸಬಹುದು.

**33. ವಿನಿಯಮನಗಳನ್ನು ರಚಿಸುವ ಅಧಿಕಾರ.–** ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ, ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕೆ ವಿನಿಯಮನಗಳನ್ನು ರಚಿಸಬಹುದು:–

(ಎ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸಭೆಗಳು ನಡೆಯುವ ಕಾಲ ಮತ್ತು ಸ್ಥಳ ಮತ್ತು ಅಂಥ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕಾಗಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕೋರಂ ಆಗಲು ಇರಬೇಕಾದ ಸದಸ್ಯರ ಸಂಖ್ಯೆ;

(ಬಿ) 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ವ್ಯಕ್ತಿಯು ತಾತ್ಕಾಲಿಕವಾಗಿ ಸಹಯೋಗ ಹೊಂದಬಹುದಾದ ರೀತಿ;

(ಸಿ) 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಲಿಯ ಅಧಿಕಾರಿಯ ಹಾಗೂ ಇತರ ನೌಕರರ ನೇಮಕದ ವಿಧಾನ, ಸೇವಾ ಷರತ್ತುಗಳು ಮತ್ತು ವೇತನ ಶ್ರೇಣಿಗಳು ಮತ್ತು ಭತ್ಯೆಗಳು;

(ಡಿ) ಸಾಮಾನ್ಯವಾಗಿ, ಮಂಡಲಿಯ ವ್ಯವಹಾರಗಳ ದಕ್ಷ ನಿರ್ವಹಣೆ.

**34. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಹಾಗೂ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ

ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

* * *

Govt. Press, Bangalore, P7, W.D:283 , Copies: 150